# ವ್ಯವಹಾರ ಅಧ್ಯಯನ

## ಅಧ್ಯಾಯ - 16

## ಬ್ಯಾಂಕ್ ವ್ಯವಹಾರಗಳು

1.ಬ್ಯಾಂಕ್ ಎಂಬ ಪದವು ಇಟಾಲಿಯನ್ ಈ ಪದದಿಂದ ಬಂದಿದೆ.

- "ಬ್ಯಾಂಕೋ"

2.ಬ್ಯಾಂಕ್ ಎಂಬ ಪದವು ಫ್ರೆಂಚಿನ ಈ ಪದದಿಂದ ಬಂದಿದೆ.

- "ಬ್ಯಾಂಕ್"

3. ಬ್ಯಾಂಕ್ ಪದದ ಅರ್ಥ - ಬೆಂಚು ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್ ಆಗಿದೆ

4. ಈ ಕೆಳಗಿನ ಹೇಳಿಕೆಗಳನ್ನು ಓದಿರಿ

A.ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ

B. ಈ ಸೌಲಭ್ಯವನ್ನು ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಪಿಂಚಣಿದಾರರು ಕೂಡ ತೆರೆಯಲು ಅವಕಾಶವಿದೆ

C.ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ ಉಳಿತಾಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ





Scanned with OKEN Scanner

D.ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ

ಮೇಲಿನ ಹೇಳಿಕೆಗಳು ಸಂಬಂಧಿಸಿದ ಸರಿಯಾದ ಉತ್ತರ

- **ಉಳಿತಾಯ ಖಾತೆ**

5. ಈ ಕೆಳಗಿನ ಹೇಳಿಕೆಗಳನ್ನು ಓದಿರಿ

A.ಈ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ

B.ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳ ಅಥವಾ ಉಪಸರ್ಗ ವ್ಯವಹಾರಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಾಗುತ್ತದೆ.

Cಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು.

D. ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ ಆದರೆ ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತವೆ.

ಮೇಲಿನ ಹೇಳಿಕೆಗಳು ಸಂಬಂಧಿಸಿದ ಸರಿಯಾದ ಉತ್ತರ

- **ಚಾಲ್ತಿ ಖಾತೆ**



Scanned with OKEN Scanner

6. ಈ ಕೆಳಗಿನ ಹೇಳಿಕೆಗಳನ್ನು ಓದಿರಿ

A.ಆವರ್ತ ಠೇವಣಿ ಖಾತೆಗಳನ್ನು ಸಾಮಾನ್ಯವಾಗಿ ಭವಿಷ್ಯ ಕಾಲದಲ್ಲಿ ಯಾವುದಾದರೂ ಒಂದು ನಿರ್ಧಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆರೆಯಲ್ಪಡುತ್ತದೆ.

B.ಭವಿಷ್ಯದ ಅವಶ್ಯಕತೆಗಳಿಗೆ ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡುತ್ತಾರೆ.

C.(ಭವಿಷ್ಯದ ಅವಶ್ಯಕತೆಗಳಾದ ಮಕ್ಕಳ ವಿವಾಹ, ಬೆಲೆ ಬಾಳುವ ವಸ್ತುಗಳ ಖರೀದಿ, ನೆಲ, ಕಾರು ಮುಂತಾದುವನ್ನು ಕೊಳ್ಳಲು) ಅವಧಿ ಮುಗಿದ ನಂತರ ಠೇವಣಿ ಮಾಡಿದ ಹಣದ ಜೊತೆಗೆ ಬಡ್ಡಿಯನ್ನು ಸೇರಿಸಿ ಹಣವನ್ನು ಬ್ಯಾಂಕು ಹಿಂದಿರುಗಿಸುತ್ತದೆ.

ಮೇಲಿನ ಹೇಳಿಕೆಗಳು ಸಂಬಂಧಿಸಿದ ಸರಿಯಾದ ಉತ್ತರ

- ಆವರ್ತ ಠೇವಣಿ ಖಾತೆ

7. ಈ ಕೆಳಗಿನ ಹೇಳಿಕೆಗಳನ್ನು ಓದಿರಿ

A.ಈ ಖಾತೆಯಲ್ಲಿ ಠೇವಣಿಯನ್ನು ಒಂದು ನಿಗಧಿತ ಅವಧಿಗೆ ಇಡಲಾಗುತ್ತದೆ.

B. ಠೇವಣಿ ಹಣವನ್ನು ನಿಶ್ಚಿತ ಅವಧಿ ಮುಗಿದ ನಂತರ ಠೇವಣಿದಾರರಿಗೆ ಪಾವತಿ ಮಾಡಲಾಗುತ್ತದೆ. (ನಿಶ್ಚಿತ ಅವಧಿ ತಿಂಗಳಾಗಿರಬಹುದು ಆರು ತಿಂಗಳಾಗಿರಬಹುದು, ಒಂದು ವರ್ಷವಾಗಿರಬಹುದು, ಐದು ವರ್ಷಗಳಾಗಿರಬಹುದು ಅಥವಾ ಹತ್ತು ವರ್ಷಗಳಾಗಿರಬಹುದು) ಠೇವಣಿ ಹಣವನ್ನು ನಿಗದಿತ ಅವಧಿಗೆ ಮುಂಚೆ ಹಿಂದಕ್ಕೆ ಪಡೆಯಲು ಸಾಧ್ಯವಿಲ್ಲ.

C.ಬಡ್ಡಿದರ ಅವಧಿಗನುಗುಣವಾಗಿ ಹೆಚ್ಚಾಗಿರುತ್ತದೆ.

ಮೇಲಿನ ಹೇಳಿಕೆಗಳು ಸಂಬಂಧಿಸಿದ ಸರಿಯಾದ ಉತ್ತರ



Scanned with OKEN Scanner

- ನಿಶ್ಚಿತ ಠೇವಣಿ ಖಾತೆ

8. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಈ ಇಲಾಖೆಯು ನೀಡುತ್ತದೆ.

- ಭಾರತೀಯ ಅಂಚೆ ಇಲಾಖೆ



Scanned with OKEN Scanner

# ಇತಿಹಾಸ

## ಅಧ್ಯಾಯ - 17

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

1.1857ರ ದಂಗೆಯನ್ನು ಭಾರತೀಯ ಇತಿಹಾಸಕಾರರು ಏನೆಂದು ಕರೆದಿದ್ದಾರೆ

- ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

2. 1857ರ ದಂಗೆಯನ್ನು ಇಂಗ್ಲಿಷ್ ಇತಿಹಾಸಕಾರರು ಏನೆಂದು ಕರೆದಿದ್ದಾರೆ

- ಸಿಪಾಯಿ ದಂಗೆ

3. ಡಾಲ್ ಹೌಸಿಯು ಜಾರಿಗೆ ತಂದ ನೀತಿ ಯಾವುದು

- ದತ್ತು ಮಕ್ಕಳಿಗೆ ಹಕ್ಕಿಲ್ಲ

4. 1857 ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು ಯಾರು

- ಮಂಗಲ ಪಾಂಡೆ

5. "ದತ್ತು ಮಕ್ಕಳಿಗೆ ಹಕ್ಕಿಲ್ಲ "ನೀತಿಯನ್ವಯ ಬ್ರಿಟಿಷರ ಅಧೀನವಾದ ಸಂಸ್ಥಾನಗಳು ಯಾವುವು

- ಸತಾರ, ಝಾನ್ಸಿ, ಜೈಪುರ, ಸಂಬಲ್‌ಪುರ, ಉದಯಪುರ,



Scanned with OKEN Scanner

6. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ಯಾವ ಪ್ರದೇಶವನ್ನು ವಶಕ್ಕೆ ಪಡೆದಳು

- ಗ್ವಾಲಿಯರ್ ಪ್ರದೇಶ

7. 1857ರ ದಂಗೆಯ ಸಮಯದಲ್ಲಿ ಕಾನ್ಪುರದಲ್ಲಿ ದಂಗೆಯ ನೇತೃತ್ವವನ್ನು ವಹಿಸಿದವರು ಯಾರು

- ನಾನಾ ಸಾಹೇಬ

8. 1857ರ ದಂಗೆಯ ಸಮಯದಲ್ಲಿ ಬ್ರಿಟಿಷರು ತಂದ ನವೀನ ಬಂದೂಕು ಯಾವುದು

- ರಾಯಲ್ ಎನ್‌ಫೀಲ್ಡ್

9. ಲಕ್ಷ್ಮೀಬಾಯಿ ದಂಗೆ ಏಳಲು ಕಾರಣ ಏನು

- 'ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ'

10. ನಾನಾ ಸಾಹೇಬನ ಸಹಾಯಕನ ಹೆಸರೇನು

- ತಾತ್ಯಾಟೋಪಿ

11. ಬ್ರಿಟನ್ ರಾಣಿಯಾ ಘೋಷಣೆ ಹೊರಡಿಸಲ್ಪಟ್ಟ ವರ್ಷ

- 1858



Scanned with OKEN Scanner

12. 1858 ರಲ್ಲಿ ಬ್ರಿಟನ್ ರಾಣಿಯು ಒಂದು ಘೋಷಣೆಯನ್ನು ಹೊರಡಿಸಿದಳು. ಅದನ್ನು 'ಮಹಾಸನ್ನದು' ಎಂದು ಕರೆಯಲಾಗಿದೆ.

## ಅಧ್ಯಾಯ - 18

## ಸ್ವಾತಂತ್ರ್ಯ ಹೋರಾಟ

1.ಪತ್ರಿಕೋದ್ಯಮದಲ್ಲಿ ಜನರನ್ನು ನಿಯಂತ್ರಿಸಲು 1878 ರಲ್ಲಿ 'ದೇಶೀಯ ಪತ್ರಿಕೆಗಳ ನಿಯಂತ್ರಣ ಕಾಯ್ದೆ'ಯನ್ನು ಜಾರಿಗೆ ತಂದವನು

- ಲಾರ್ಡ್ ಲಿಟ್ಟನ್

2. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಮೊದಲು ಇದ್ದ ಸಂಘಟನೆಗಳು ಯಾವುವು

- ದಿ ಹಿಂದೂ ಮೇಳ
- ದಿ ಈಸ್ಟ್ ಇಂಡಿಯನ್ ಅಸೋಸಿಯೇಷನ್
- ಪೂನಾ ಸಾರ್ವಜನಿಕ ಸಭಾ
- ದಿ ಇಂಡಿಯನ್ ಅಸೋಸಿಯೇಷನ್

3. 'ಭಾರತ ರಾಷ್ಟ್ರೀಯ ಕಾಂಗ್ರೆಸ್'ನ್ನು ಯಾವಾಗ ಸ್ಥಾಪನೆ ಮಾಡಲಾಯಿತು

- 1885



Scanned with OKEN Scanner

4. 'ಭಾರತ ರಾಷ್ಟ್ರೀಯ ಕಾಂಗ್ರೆಸ್ ಯಾವ ರಾಷ್ಟ್ರೀಯ ಸಮಾವೇಶದಲ್ಲಿ ಹುಟ್ಟಿಕೊಂಡಿತು

- ಬಾಂಬೆ

5. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕರು ಯಾರು

- ಎ.ಓ.ಹ್ಯೂಮ್

6. ಮಂದಗಾಮಿ ನಾಯಕರುಗಳ ಸರಿಯಾದ ಗುಂಪು

- ಎಂ.ಜಿ. ರಾನಡೆ
- ಸುರೇಂದ್ರನಾಥ ಬ್ಯಾನರ್ಜಿ
- ದಾದಾಬಾಯಿ ನವರೋಜಿ
- ಗೋಪಾಲಕೃಷ್ಣ ಗೋಖಲೆ

7. 'ಸಂಪತ್ತಿನ ಸೋರುವಿಕೆ ಸಿದ್ಧಾಂತ'ದ ಪ್ರತಿಪಾದಕರು ಯಾರು

- ದಾದಾಬಾಯಿ ನವರೋಜಿ

8. ತೀವ್ರವಾದಿಗಳು ಯಾರನ್ನು ರಾಜಕೀಯ ಭಿಕ್ಷುಕರು ಎಂದು ಕರೆದರು

- ಮಂದಗಾಮಿಗಳನ್ನು

9. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾಗಿ ಹೆಸರುಗಳನ್ನು ಕಂಡುಬರುವ ತೀವ್ರಗಾಮಿಗಳನ್ನು ಗುರುತಿಸಿರಿ

- ಅರಬಿಂದೋ ಘೋಷ್
- ಬಿಪಿನ್ ಚಂದ್ರ ಪಾಲ್



Scanned with OKEN Scanner

- ಲಾಲ ಲಜಪತ ರಾಯ್
- ಬಾಲಗಂಗಾಧರ ತಿಲಕ್

10. ಬಂಗಾಳದ ವಿಭಜನೆಯನ್ನು ಮಾಡಿದವರು ಯಾರು

- ಲಾರ್ಡ್ ಕರ್ಜನ್

11. ಬಂಗಾಳದ ವಿಭಜನೆಗೆ ಮುಖ್ಯ ಕಾರಣವೇನು

- ಬಂಗಾಳವು ತೀವ್ರ ಸ್ವರೂಪದ ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು. ಇದನ್ನು ಹತ್ತಿಕ್ಕಲು ಬಂಗಾಳವನ್ನು ವಿಭಜಿಸಲಾಯಿಸಲಾಯಿತು

12. ಬಂಗಾಳದ ವಿಭಜನೆಯನ್ನು ಯಾವಾಗ ಮಾಡಲಾಯಿತು

- 1905

13. ಬಂಗಾಳದ ವಿಭಜನೆಯನ್ನು ಬ್ರಿಟಿಷ್ ಸರ್ಕಾರವು ಹಿಂಪಡೆದ ವರ್ಷ

- 1911

14. 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದವರು

- ಬಾಲಗಂಗಾಧರ ತಿಲಕ್

15. ಗೀತಾರಹಸ್ಯ ಎಂಬ ಗ್ರಂಥವನ್ನು ರಚಿಸಿದವರು ಯಾರು

- ಬಾಲಗಂಗಾಧರ ತಿಲಕ್



Scanned with OKEN Scanner

16. ಬಾಲಗಂಗಾಧರ ತಿಲರು ಆರಂಭಿಸಿದ ಪತ್ರಿಕೆಗಳು

- ತಿಲಕರು ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳನ್ನು ಆರಂಭಿಸಿದರು.

17. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿನ ಕ್ರಾಂತಿಕಾರಿ ನಾಯಕರುಗಳನ್ನು ಗುರುತಿಸಿ

- ವಿ.ಡಿ. ಸಾವರ್ಕರ್
- ಅರಬಿಂದೋ ಘೋಷ್
- ಶ್ಯಾಮಾಜಿ ಕೃಷ್ಣವರ್ಮ
- ರಾಸ್ ಬಿಹಾರಿ ಘೋಷ್
- ಮೇಡಮ್ ಕಾಮಾ
- ಖುದಿರಾಮ್ ಬೋಸ್
- ರಾಮ್‌ಪ್ರಸಾದ ಬಿಸ್ಮಿಲ್
- ಭಗತ್ ಸಿಂಗ್
- ಚಂದ್ರಶೇಖರ ಅಜಾದ್

18. ಈಶಾನ್ಯ ಭಾರತದ ಮಹಿಳೆಯರನ್ನೇ ಸೇರಿಸಿಕೊಂಡು ಒಂದು ಹೊಸ ಪಡೆಯನ್ನು ಕಟ್ಟಿ ಜಾದೋನಾಂಗ್ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಟವನ್ನು ಮಾಡಿದವಳು

- ಗಾಯಿಡಿನ್ ಲೂ

19. ಗಾಯಿಡಿನ್ ಲೂ ಧಾರ್ಮಿಕ ಜಾಗೃತಿಗಾಗಿ ಕಟ್ಟಿದ ಸಂಸ್ಥೆ- ಹರಕ್ಕಾ



Scanned with OKEN Scanner

20. ಗಾಯಿಡಿನ್ ಲೂಳ ವಿರುದ್ಧ ಕಮಾಂಡೋ ಕಾರ್ಯಾಚರಣೆಗೆ ಇಳಿದ ಬ್ರಿಟಿಷ್ ಅಧಿಕಾರಿ

- ಮ್ಯಾಕ್ ಡೋನಾಲ್ಡ್

21. ಮ್ಯಾಕ್ ಡೋನಾಲ್ಡ್‌ನಿಗೆ ಗಾಯಿಡಿನ್ ಲೂಳನ್ನು ಬಂಧಿಸಲು ಸಹಾಯ ಮಾಡಿದ ವ್ಯಕ್ತಿ

- ಡಾ. ಹರಾಲು

22. ಗಾಯಿಡಿನ್ ಲೂಳ ಸುಳಿವು ನೀಡಿದಕ್ಕಾಗಿ ಹರಾಲುವಿಗೆ ಆಂಗ್ಲ ಸರ್ಕಾರವು ನೀಡಿದ ಬಿರುದು - ಕೈಸರ್ - ಇ - ಹಿಂದ್

23. ಮಹಾತ್ಮ ಗಾಂಧೀಜಿಯವರು ಇಂಗ್ಲೆಂಡ್‌ನಲ್ಲಿ ಪಡೆದ ಪದವಿ ಯಾವುದು

- ಬಾರ್ ಅಟ್ ಲಾ

24. ಮಹಾತ್ಮ ಗಾಂಧೀಜಿಯವರು ದಕ್ಷಿಣ ಆಫ್ರಿಕಾದ 'ನಟಾಲ್'ಗೆ ಏಕೆ ಹೋದರು

- ದಾದಾ ಅಬ್ದುಲ್ಲಾ ಮತ್ತು ಕಂಪನಿಯ ವಕಾಲತ್ತು ವಹಿಸಲು ದಕ್ಷಿಣ ಆಫ್ರಿಕಾದ "ನಟಾಲ್'ಗೆ ಹೋದರು.

25. ಮಹಾತ್ಮ ಗಾಂಧೀಜಿಯವರ ಹೊಸ ಸಾಮಾಜಿಕ ಆವಿಷ್ಕಾರ ಯಾವುದು

- ಸತ್ಯಾಗ್ರಹ

26. ಮಹಾತ್ಮ ಗಾಂಧೀಜಿಯ ರಾಜಕೀಯ ಗುರು

- ಗೋಪಾಲಕೃಷ್ಣ ಗೋಖಲೆ



Scanned with OKEN Scanner

27. ಮಹಾತ್ಮ ಗಾಂಧೀಜಿಯವರು 'ಚಂಪಾರಣ್ ಚಳವಳಿ' ಯನ್ನು ಏಕೆ ಆರಂಭಿಸಿದರು

- ಗಾಂಧಿ ಬಿಹಾರದ ಚಂಪಾರಣ್‌ನಲ್ಲಿ ನೀಲಿ ಬೆಳೆಯಿಂದ ಸಂತ್ರಸ್ತರಾದ ರೈತರ ಪರವಾಗಿ

28. ಮಹಾತ್ಮ ಗಾಂಧೀಜಿಯವರ ಹೋರಾಟದ ಪ್ರಮುಖ ತಂತ್ರಗಳು

- ಪರೋಕ್ಷ ಪ್ರತಿರೋಧ, ಅಹಿಂಸೆ ಮತ್ತು 'ಸತ್ಯಾಗ್ರಹ'

29. ಮಹಾತ್ಮ ಗಾಂಧೀಜಿಯವರ ಪತ್ರಿಕೆಗಳು

- ಹರಿಜನ್ ಮತ್ತು ಯಂಗ್ ಇಂಡಿಯಾ

30. ಬ್ರಿಟಿಷ್ ಸರಕಾರವು ರೌಲೆಟ್ ಕಾಯ್ದೆಯನ್ನು ಜಾರಿಗೊಳಿಸಿದ ವರ್ಷ

- ಫೆಬ್ರವರಿ 1919

31.. ಜಲಿಯನ್ ವಾಲಾಭಾಗ್ ಹತ್ಯಾಕಾಂಡವು ಈ ಕಾಯ್ದೆಗೆ ವಿರುದ್ಧ ನಡೆದ ಹೋರಾಟದ ಪರಿಣಾಮ.- ರೌಲತ್ ಕಾಯ್ದೆ

32. ಜಲಿಯನ್ ವಾಲಾಬಾಗ್ ಘಟನೆ ಸಂಭವಿಸಿದ್ದು ಅಮೃತಸರದ ಜಲಿಯನ್ ವಾಲಾಬಾಗ್ (1919 ಏಪ್ರಿಲ್ 13)

33. ಜಲಿಯನ್ ವಾಲಾಬಾಗ್‌ನಲ್ಲಿ ಪ್ರತಿಭಟನಾಕಾರರ ಮೇಲೆ ಗುಂಡಿನ ದಾಳಿಮಾಡಿದ ಬ್ರಿಟಿಷ್ ಸೈನ್ಯಾಧಿಕಾರಿ - ಜನರಲ್ ಡಯರ್



Scanned with OKEN Scanner

34..ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ರೂವಾರಿ ಜನರಲ್ ಡಯರ್‌ನನ್ನು ಹತ್ಯೆ ಮಾಡಿದ ಕ್ರಾಂತಿಕಾರಿ - ಉದಮ್ ಸಿಂಗ್

35. ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ಪ್ರತಿಭಟಿಸಿ ರವಿಂದ್ರನಾಥ ಠಾಗೂರರು ಬ್ರಿಟಿಷ್ ಸರಕಾರಕ್ಕೆ ವಾಪಾಸ್ ಮಾಡಿದ ಪದವಿ - 'ನೈಟ್‌ಹುಡ್' ಪದವಿ

36. ಖಿಲಾಫತ್ ಚಳವಳಿಯ ನಾಯಕರು ಯಾರು

- ಮಹಮದ್ ಅಲಿ ಮತ್ತು ಶೌಕತ್ ಅಲಿ

37. ಚೌರಿ ಚೌರ ಘಟನೆ ನಡೆದ ಸ್ಥಳ

- ಗೋರಕ್ ಪುರ

38. ಗಾಂಧೀಜಿಯವರು 1920 ರಲ್ಲಿ ಅಸಹಕಾರ ಹೋರಾಟವನ್ನು ಏಕೆ ಹಿಂತೆಗೆದುಕೊಂಡರು

- ಚೌರಿ ಚೌರ ಘಟನೆಯಿಂದ ಮನನೊಂದು ಗಾಂಧೀಜಿಯವರು ಅಸಹಕಾರ ಹೋರಾಟವನ್ನು ಹಿಂತೆಗೆದುಕೊಂಡರು

39. ಸ್ವರಾಜ್ ಪಕ್ಷದ ಸ್ಥಾಪಕರು ಯಾರು

- ಸಿ.ಆರ್.ದಾಸ್ ಮತ್ತು ಮೋತಿಲಾಲ್ ನೆಹರು

40. ಲಾಹೋರ್‌ನಲ್ಲಿ ನಡೆದ ಹೋರಾಟದ ಸಂದರ್ಭದಲ್ಲಿ ಲಾಠಿಚಾರ್ಜ್ ಮಾಡಿದ ಕಾರಣ ಅವರು ಮರಣ ಹೊಂದಿದವರು

- ಲಾಲಾ ಲಜಪತರಾಯ್



Scanned with OKEN Scanner

41. ಯಾವ ಕಾಂಗ್ರೆಸ್ ಅಧಿವೇಶನದಲ್ಲಿ 'ಪೂರ್ಣ ಸ್ವರಾಜ್ ಅನ್ನು ಅಂಗೀಕರಿಸಲಾಯಿತು

- ಲಾಹೋರ್ ಕಾಂಗ್ರೆಸ್ ಅಧಿವೇಶನ

42. ಲಾಹೋರ ಕಾಂಗ್ರೆಸ್ ಅಧಿವೇಶನವು ಈ ದಿನವನ್ನು ಸ್ವಾತಂತ್ರ್ಯ ದಿನವೆಂದು ಘೋಷಿಸಿತು

- 1930 ಜನವರಿ 26

43. ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿಯವರು ಎಲ್ಲಿ ನಡೆಸಿದರು (1930)

- ದಂಡಿ

44. ಕಾನೂನು ಭಂಗ ಚಳವಳಿಯಲ್ಲಿ ಗಾಂಧೀಜಿಯವರೊಂದಿಗೆ ಭಾಗವಹಿಸಿದ್ದವರ ಸರಿಯಾದ ಗುಂಪು

- ವಿಜಯಲಕ್ಷ್ಮಿ ಪಂಡಿತ್, ಕಮಲಾನೆಹರು, ವಲ್ಲಭಬಾಯಿ ಪಟೇಲ್, ರಾಜಗೋಪಾಲಚಾರಿ, ಬಾಬು ರಾಜೇಂದ್ರ ಪ್ರಸಾದ್

45. ಎರಡನೆಯ ದುಂಡುಮೇಜಿನ ಪರಿಷತ್ತಿನ ಸಮಾವೇಶದಲ್ಲಿ ಭಾಗವಹಿಸಿದವರು ಯಾರು

- ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್

46. ಗಾಂಧೀ-ಇರ್ವಿನ್ ಒಪ್ಪಂದ ಏರ್ಪಟ್ಟ ವರ್ಷ

- 1931 ಮಾರ್ಚ್ 5



Scanned with OKEN Scanner

47. ಎರಡನೆಯ ದುಂಡು ಮೇಜಿನ ಪರಿಷತ್ತು ಸಮಾವೇಶ ಯಾವುದೇ ತೀರ್ಮಾನವಿಲ್ಲದೆ ಮುಕ್ತಾಯಗೊಳ್ಳಲು ಕಾರಣವೇನು

- ಅಂಬೇಡ್ಕರ್‌ರವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮುಂದಿಟ್ಟರು ಈ ಪ್ರಸ್ತಾಪವನ್ನು ಗಾಂಧೀಜಿಯವರು ಒಪ್ಪಲಿಲ್ಲ

48. ಗಾಂಧೀಜಿಯವರು ದೇಶಬಾಂಧವರಿಗೆ ಮಾಡು ಇಲ್ಲವೇ ಮಡಿ' ಎನ್ನುವ ಕರೆಯನ್ನು ಯಾವ ಚಳವಳಿಯಲ್ಲಿ ನೀಡಿದರು

- ಕ್ವಿಟ್ ಇಂಡಿಯಾ ಚಳವಳಿ (1942)

49. ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಸಮಾಜವಾದಿಗಳು ತಮ್ಮ ಕಾರ್ಯತಂತ್ರವನ್ನು ಈ ಗುಂಪಿನ ಹೆಸರಿನಲ್ಲಿ ಅನುಷ್ಠಾನಕ್ಕೆ ತಂದರು.

- ' ದಿ ಫ್ರೀಡಂ ಸ್ಟ್ರಗಲ್ '

50. ಈಸೂರು ಘಟನೆ ನಡೆದ ವರ್ಷ

- **1942**

51. ಫಾರ್ವರ್ಡ್  ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದವರು ಯಾರು

- ಸುಭಾಷ್ ಚಂದ್ರ ಬೋಸ್

52. 'ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್'ನ್ನು ಸ್ಥಾಪಿಸಿದವರು ಯಾರು

- ರಾಸ್ ಬಿಹಾರಿ ಬೋಸ್



Scanned with OKEN Scanner

53. 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆ ನೀಡಿದವರು ಯಾರು

- ಸುಭಾಷ್ ಚಂದ್ರ ಬೋಸ್

54.. ಭಾರತೀಯ ರಾಷ್ಟ್ರೀಯ ಸೇನೆಯಲ್ಲಿ ಝಾನ್ಸಿ ರೆಜಿಮೆಂಟ್ ಎಂಬ ವಿಭಾಗದ ನೇತೃತ್ವವನ್ನು ವಹಿಸಿದವರು

- ಕ್ಯಾಪ್ಟನ್ ಲಕ್ಷ್ಮೀ ಸಹಗಲ್

55. ಸುಭಾಷ್‌ರು ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದ ರೇಡಿಯೋ

– ಆಜಾದ್ ಹಿಂದ್ ರೇಡಿಯೋ

56. ಸಾಮಾಜಿಕ ಸಮಾನತೆಯಿಲ್ಲದ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಬಲವಾಗಿ ನಂಬಿದ್ದವರು ಯಾರು

- ಡಾ. ಬಿ.ಆರ್. ಅಂಬೇಡ್ಕರ್

57. 'ಮಹದ್' ಕೆರೆ ಮತ್ತು 'ಕಾಲಾರಾಂ' ದೇವಾಲಯ ಚಳವಳಿಗಳನ್ನು ರೂಪಿಸಿದವರು ಯಾರು - ಡಾ. ಬಿ.ಆರ್. ಅಂಬೇಡ್ಕರ್

58. 'ಬಹಿಷ್ಕೃತ ಹಿತಕಾರಣಿ ಸಭಾ' ಎಂಬ ಸಂಘಟನೆಯನ್ನು ಹಾಗೂ 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬ ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದವರು ಯಾರು

- ಡಾ. ಬಿ.ಆರ್. ಅಂಬೇಡ್ಕರ್



Scanned with OKEN Scanner

59. ಡಾ. ಬಿ.ಆರ್. ಅಂಬೇಡ್ಕರ್ ಆರಂಭಿಸಿದ ಪತ್ರಿಕೆಗಳು ಯಾವುವು

- 'ಪ್ರಬುದ್ಧ ಭಾರತ', 'ಜನತಾ', 'ಮೂಕನಾಯಕ' 'ಬಹಿಷ್ಕೃತ ಭಾರತ'

60.. ರಾಷ್ಟ್ರೀಯ ಕಾಂಗ್ರೆಸ್ಸಿನ ಲಾಹೋರ್ ಅಧಿವೇಶನದ ಅಧ್ಯಕ್ಷರಾಗಿದ್ದವರು ಯಾರು

- ಜವಾಹರಲಾಲ್ ನೆಹರು

61. 'ಕಾಂಗ್ರೆಸ್ ಇಂದು ಭಾರತದಲ್ಲಿ ಪೂರ್ಣ ಪ್ರಜಾಪ್ರಭುತ್ವಕ್ಕಾಗಿ ಪ್ರಜಾಪ್ರಭುತ್ವಕ್ಕಾಗಿಯೇ ಹೋರಾಡುತ್ತದೆಯೇ ಹೊರತು ನಿಂತಿದೆ ಹಾಗೂ ಸಮಾಜವಾದಕ್ಕಲ್ಲ' ಎಂದವರು ಯಾರು

- ಜವಾಹರಲಾಲ್ ನೆಹರು

62. ನೇರ ಕಾರ್ಯಾಚರಣೆ ದಿನಕ್ಕೆ ಕರೆ ನೀಡಿದವರು ಯಾರು

- ಮುಸ್ಲಿಂ ಲೀಗ್

63.. ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ದವರು ಯಾರು

- ಸರ್ದಾರ್ ವಲ್ಲಭಬಾಯ್ ಪಟೇಲ್

64. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು ಯಾರು

- ಸುಭಾಷ್ ಚಂದ್ರ ಬೋಸ್

65. ಗಾಂಧೀಜಿಯವರ ಹೋರಾಟದ ಅಂತಃಸತ್ವದ ಸಾಧನಗಳಾವುವು

- ಸತ್ಯಾಗ್ರಹ, ಅಹಿಂಸೆ, ಹಿಂದೂ ಮುಸ್ಲಿಂ ಏಕತೆ



Scanned with OKEN Scanner

66.. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಆಗಸ್ಟ್ 16 ರಂದು ನೇರ ಕಾರ್ಯಾಚರಣೆ ದಿನಕ್ಕೆ (Direct Action Day) ಕರೆ ನೀಡಿತು

## ಅಧ್ಯಾಯ – 19

## ಸ್ವಾತಂತ್ರ್ಯೋತ್ತರ ಭಾರತ

1.ಮೌಂಟ್ ಬ್ಯಾಟನ್ ವರದಿಯನ್ನು ಆಧರಿಸಿ 1947ರ ಜೂನ್ 3 ರಂದು ಬ್ರಿಟಿಷ್ ಸರ್ಕಾರ ಮಾಡಿದ ಘೋಷಣೆಯು - ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳ ಅಸ್ತಿತ್ವಕ್ಕೆ ಕಾರಣವಾಯಿತು

2. ಯಾವ ತಿದ್ದುಪಡಿ ತಂದು 'ಜಾತ್ಯತೀತ' ಮತ್ತು 'ಸಮಾಜವಾದಿ' ಎಂಬ ಎರಡು ಅಂಶಗಳನ್ನು 1976ರಲ್ಲಿ ಸೇರಿಸಲಾಯಿತು

- 42ನೇ ತಿದ್ದುಪಡಿ

3. ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ ಎಷ್ಟು ಸಂಸ್ಥಾನಗಳಿದ್ದವು

- 562

4. ಭಾರತದ ಉಕ್ಕಿನ ಮನುಷ್ಯ ಎಂದು ಯಾರನ್ನು ಕರೆಯುತ್ತಾರೆ

- ವಲ್ಲಭಬಾಯಿ ಪಟೇಲ್



Scanned with OKEN Scanner

5. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಜಮ್ಮು ಕಾಶ್ಮೀರದ ರಾಜ ಯಾರಾಗಿದ್ದರು

- ಹರಿಸಿಂಗ್

6. ಜುನಾಗಡ್ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾದ ವರ್ಷ

- 1949

7.ಭಾರತ ಸ್ವಾತಂತ್ರ್ಯ ಪಡೆಯುವ ಹೈದರಾಬಾದ್ ಯಾರ ಅಧಿನದಲ್ಲಿತ್ತು

- ನಿಜಾಮರು

8. ಹೈದರಾಬಾದ ನಿಜಾಮನ ಸೈನ್ಯದ ಹೆಸರೇನು

- ರಜಾಕರು

9. ಭಾರತ ಸರ್ಕಾರ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ ಹೈದರಾಬಾದ್ ಸಂಸ್ಥಾನವನ್ನು 1948 ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಿತು.

10.ಹೈದರಾಬಾದ್ ನಿಜಾಮನು ಭಾರತಕ್ಕೆ ಸೇರಲು ಏಕೆ ನಿರಾಕರಿಸಿದನು

- ಈತನು ಸ್ವತಂತ್ರವಾಗುಳಿಯುವ ಉದ್ದೇಶದಿಂದ

11. ಭಾರತ ಸ್ವಾತಂತ್ರ್ಯ ಪಡೆದಾಗ ಜುನಾಗಡ್ ನವಾಬ ಈ ದೇಶದೊಂದಿಗೆ ಸೇರಲು ಬಯಸಿದ - ಪಾಕಿಸ್ತಾನ

12.ಜಮ್ಮು ಕಾಶ್ಮೀರದ ರಾಜ ತನ್ನ ರಾಜ್ಯವನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸುವ ಒಪ್ಪಂದಕ್ಕೆ ಯಾವ ವರ್ಷ ಸಹಿ ಹಾಕಿದನು

- 1947



Scanned with OKEN Scanner

13. ಜನವರಿ 1, 1949ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮ ಆದೇಶ ನೀಡಿದವರಾರು

- ವಿಶ್ವಸಂಸ್ಥೆ

14. ಪಾಂಡಿಚೇರಿಯು ಯಾವಾಗ ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು

- 1962

15. ಗೋವಾ ಭಾರತದ ಒಕ್ಕೂಟವನ್ನು ಯಾವಾಗ ಸೇರ್ಪಡೆಗೊಂಡಿತು

- 1961

16. 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು

17. ವಿಶಾಲ ಆಂಧ್ರ ರಾಜ್ಯ ರಚಿಸಬೇಕೆಂದು 58 ದಿನಗಳ ಉಪವಾಸ ಸತ್ಯಾಗ್ರಹ ನಡೆಸಿ ಅಸುನೀಗಿದವರು ಯಾರು

- ಪೊಟ್ಟಿ ಶ್ರೀರಾಮುಲು (1952) ರಲ್ಲಿ

18. ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ಯಾವಾಗ ರಚಿಸಲಾಯಿತು

- 1953

19. ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದ ವರ್ಷ

- 1956

20. ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಯಾರು

- ಕೆ.ಎಂ.ಫಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು



Scanned with OKEN Scanner

21. ವಿಶಾಲ 'ಮೈಸೂರು ರಾಜ್ಯ'ವು ಯಾವಾಗ ಅಸ್ತಿತ್ವಕ್ಕೆ ಬಂದಿತು

- 1956 ನವೆಂಬರ್ 1

22. ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ಯಾವಾಗ ಮರುನಾಮಕರಣ ಮಾಡಲಾಯಿತು

- 1973

23. ಸ್ವಾತಂತ್ರ್ಯ ದ ನಂತರವೂ ಪೋರ್ಚುಗೀಸರ ವಶದಲ್ಲಿದ್ದ ಭಾರತದ ಪ್ರದೇಶ ಯಾವುದು

- ಗೋವಾ

24. ಭಾರತದ ಕೊನೆಯ ಬ್ರಿಟಿಷ್ ಗವರ್ನರ್ ಜನರಲ್

- ಲಾರ್ಡ್ ಮೌಂಟ್ ಬ್ಯಾಟನ್

## ಅಧ್ಯಾಯ - 20

## ಮಹಾಯುದ್ಧಗಳು ಹಾಗೂ ಭಾರತದ ಪಾತ್ರ

1. ಕದನ ಬಾಂಧವ್ಯತ್ರಯ ಮೈತ್ರಿಕೂಟವನ್ನು ಮಾಡಿಕೊಂಡ ದೇಶಗಳು

- ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ

2. ಕದನ ಸೌಹಾರ್ದತ್ರಯ ಮೈತ್ರಿಕೂಟವನ್ನು ಮಾಡಿಕೊಂಡ ದೇಶಗಳು

- ಜರ್ಮನಿ, ಆಸ್ಟ್ರಿಯಾ-ಹಂಗೇರಿ ಮತ್ತು ಇಟಲಿ



Scanned with OKEN Scanner

3. ಮೊದಲ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು

- ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ ( ಜುಲೈ 28, 1914)

4. ಮೊದಲ ಮಹಾಯುದ್ಧದ ಸಮಯದಲ್ಲಿ ರಷ್ಯಾ ಹಿಂದೆ ಸರಿಯಲು ಕಾರಣವೇನು

- ನವಂಬರ್ 1917 ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಿ ರಷ್ಯಾ ಯುದ್ಧದಿಂದ ಹಿಂದೆ ಸರಿಯಿತು.

5. ಮೊದಲ ಮಹಾಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು

- ವರ್ಸೈಲ್ಸ್ ಒಪ್ಪಂದ ( 1919)

6. ಮೊದಲ ಮಹಾಯುದ್ಧದ ನಂತರ ಆರಂಭಗೊಂಡ ಸಂಸ್ಥೆ ಯಾವುದು

- ರಾಷ್ಟ್ರಸಂಘ

7. ರಷ್ಯಾವನ್ನು ಆಳುತ್ತಿದ್ದ ದೊರೆಗಳನ್ನು ಏನೆಂದು ಕರೆಯುತ್ತಿದ್ದರು

- ಝಾರ್

8. 1905ರಲ್ಲಿ ರಷ್ಯಾದಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಪ್ರತಿರೋಧ ಉಂಟಾಗಲು ಕಾರಣವೇನು

- 1905ರಲ್ಲಿ ಜಪಾನ್‌ನಂತಹ ಪುಟ್ಟ ದೇಶ ರಷ್ಯಾವನ್ನು ಸೋಲಿಸಿತು

9. ರಷ್ಯಾದ ಕೊನೆಯ ದೊರೆ ಯಾರು

- ಎರಡನೆಯ ನಿಕೋಲಸ್



Scanned with OKEN Scanner

10. ರಷ್ಯಾದಲ್ಲಿ 'ಫೆಬ್ರವರಿ ಕ್ರಾಂತಿ' ನಂತರ ಅಧಿಕಾರವನ್ನು ಯಾರು ಪಡೆದುಕೊಂಡರು

- ಮೆನ್ಶವಿಕ್

11. ರಷ್ಯಾದ ಜನರಿಗೆ ಸರಳವಾದ 'ಶಾಂತಿ, ಆಹಾರ, ಭೂಮಿ' ಎಂಬ ಜನಪರ ಘೋಷಣೆಗಳನ್ನು ನೀಡಿದವರು ಯಾರು

- ಲೆನಿನ್

12. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದವರು ಯಾರು

- ಜೋಸೆಫ್ ಸ್ಟಾಲಿನ್

13. ಸೋವಿಯತ್ ಒಕ್ಕೂಟದ ಅಧ್ಯಕ್ಷರಾದ ಗೋರ್ಬಚೆವ್ ಜಾರಿಗೆ ತಂದ ಸುಧಾರಣೆಗಳು ಯಾವುವು

- ಗ್ಲಾಸ್‌ನೋಸ್ ಮತ್ತು ಪೆರೆಸ್ಟ್ರೋಯಿಕ

14. ಫ್ಯೂರರ್ ಎಂದು ಯಾರನ್ನು ಕರೆಯುವರು

- ಹಿಟ್ಲರ್

15. ಹಿಟ್ಲರ್ ಆರಂಭಿಸಿದ ರಾಜಕೀಯ ಪಕ್ಷ ಯಾವುದು

- ನಾಜಿ ಪಕ್ಷ



Scanned with OKEN Scanner

16. 'ಗೋಬೆಲ್ಸ್' ಎಂದರೆ

- ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಹಿಟ್ಲರನು ನೇಮಿಸದ ವಿಶೇಷವಾದ ಮಂತ್ರಿ

17. ಹಿಟ್ಲರ್ ಆರಂಭಿಸಿದ ಕ್ರೌರ್ಯಪಡೆಯ ಹೆಸರೇನು

- ಬೂದು ಅಂಗಿದಳ

18. 'ಬೂದು ಅಂಗಿದಳ'ದ ಉದ್ದೇಶ

- ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸುವುದು

19. ಹೊಲೊಕಾಸ್ಟ್ ಎಂದರೆ

- ಹಿಟ್ಲರನ ಸಾಮೂಹಿಕ ಕಗ್ಗೊಲೆ

20. ಕಾನ್ಸೆಂಟ್ರೇಷನ್ ಕ್ಯಾಂಪ್ಸ್' ಎಂದರೆ

- ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳುವುದು

21. ಮುಸೋಲಿನಿ ಆರಂಭಿಸಿದ ಪಕ್ಷ ಯಾವುದು

- ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ

22. ಆಕ್ಸಿಸ್ ಬಣದ ದೇಶಗಳನ್ನು ಹೆಸರಿಸಿ

- ಜರ್ಮನಿ,ಇಟಲಿ ಮತ್ತು ಜಪಾನ್



Scanned with OKEN Scanner

23. ಆಲೀಸ್ ಬಣದ ದೇಶಗಳನ್ನು ಹೆಸರಿಸಿ

- ಬ್ರಿಟನ್, ಫ್ರಾನ್ಸ್, ರಷ್ಯಾ

24.ಮೈಸೂರು ಲ್ಯಾನ್ಸೆರ್ಸ್ ಗಳ ಮುಖ್ಯಸ್ಥರಾಗಿ ಯಾರನ್ನು ಯುದ್ಧಭೂಮಿಗೆ ಕಳುಹಿಸಲಾಯಿತು

- ಬಿ. ಚಾಮರಾಜ ಅರಸು

25. ಎರಡನೆಯ ಮಹಾಯುದ್ಧ ಆರಂಭವಾದ ವರ್ಷ

- **1939**

26. ಜರ್ಮನಿಯ ಸೋಲುಗಳಲ್ಲಿ ಮುಖ್ಯ ಪಾತ್ರ ವಹಿಸಿದ ದೇಶ – ರಷ್ಯಾ

27. ಮೈಸೂರು ದರ್ಬಾರಿನ ಪ್ರತಿನಿಧಿಯಾಗಿ ವಿಶ್ವ ಯುದ್ಧದಲ್ಲಿ ಪಾಲ್ಗೊಂಡವರು

- ಕರ್ನಲ್.ಜಿ. ದೇಸಿರಾಜ ಅರಸು

28. ಮೊದಲ ವಿಶ್ವಸಮರದಲ್ಲಿ ಭಾಗಿಯಾದ ಭಾರತದ 3 ಲ್ಯಾನ್ಸರ್

1) ಮೈಸೂರು ಲ್ಯಾನ್ಸರ್

2) ಹೈದರಾಬಾದ್ ಲ್ಯಾನ್ಸರ್

3) ಜೋಧಪುರ ಲ್ಯಾನ್ಸರ್

- ಈ ಮೂರು ಲ್ಯಾನ್ಸರ್‌ಗಳ ಹೆಸರಿನಲ್ಲಿ ಬ್ರಿಟಿಷರು ದೆಹಲಿಯಲ್ಲಿ "ತೀನ್ ಮೂರ್ತಿ ಭವನ"ವನ್ನು ನಿರ್ಮಿಸಿದರು.



Scanned with OKEN Scanner

**29. 1945ರಲ್ಲಿ ಎರಡನೇ ಮಹಾಯುದ್ಧವು ಕೊನೆಗೊಂಡಿತು. ಇದರಿಂದಾಗಿ ಪ್ರಪಂಚದ ಅನೇಕ ಕಡೆಗಳಲ್ಲಿ ರಾಜಕೀಯ ಬದಲಾವಣೆಗಳಾದವು, ಬ್ರಿಟನ್ ಹಿಡಿತದಲ್ಲಿದ್ದ ಆನೇಕ ರಾಷ್ಟ್ರಗಳು ಸ್ವತಂತ್ರವಾದವು**

| ದೇಶಗಳು | ಸ್ವತಂತ್ರ ವಾದ ವರ್ಷ |
|---|---|
| • ಲಿಬಿಯಾ - | 1951 |
| • ಸುಡಾನ್ - | 1956 |
| • ಘಾನಾ - | 1957 |
| • ನೈಜೀರಿಯಾ - | 1961 |
| • ಅಲ್ಜಿರಿಯಾ - | 1962 |
| • ಕೀನ್ಯಾ - | 1963 |
| • ಝಾಂಬಿಯಾ - | 1964 |



Scanned with OKEN Scanner

# ರಾಜ್ಯಶಾಸ್ತ್ರ

## ಅಧ್ಯಾಯ-21

## ಜಾಗತಿಕ ಸವಾಲುಗಳು ಹಾಗೂ ಭಾರತದ ಪಾತ್ರ

**1.ವಿಶ್ವಸಂಸ್ಥೆಯ ಇತಿಹಾಸದಲ್ಲಿ 1948 ಡಿಸೆಂಬರ್ 10 ಮಹತ್ವದ ದಿನವಾಗಿದೆ**

- ಮಾನವ ಹಕ್ಕುಗಳ ಘೋಷಣೆ

**2. ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಜಾರಿಗೆ ಮುಷ್ಟಿ ನೀಡಿದ ಘಟನೆಗಳು**

- 1776 ರ ಅಮೆರಿಕಾದ ಸ್ವಾತಂತ್ರ್ಯ ಯುದ್ಧ
- 1789 ರ ಫ್ರಾನ್ಸಿನ ಮಹಾಕ್ರಾಂತಿ
- 1917 ರ ರಷ್ಯಾ ಕ್ರಾಂತಿ

**3. ಭಾರತವು ನಿರಂತರವಾಗಿ ಪ್ರತಿಪಾದಿಸುತ್ತಿರುವುದು**

- ಸಾರ್ವತ್ರಿಕ ಮಾನವ ಹಕ್ಕುಗಳು

**4. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣಾ ಮಾರ್ಗಸೂಚಿಯಲ್ಲಿ ಕಂಡು ಬರುವ ಹಕ್ಕು**

- ಜೀವಿಸುವ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಭದ್ರತೆ
- ಗುಲಾಮಗಿರಿ ಪದ್ಧತಿ ನಿಷೇಧ



Scanned with OKEN Scanner

- ಮಹಿಳಾ ಶೋಷಣೆ ಮುಕ್ತ

5. ಪ್ರತಿಯೊಬ್ಬನ ಜನ್ಮತಃ ಅಥವಾ ಹುಟ್ಟಿನಿಂದಲೇ ಬರತಕ್ಕಂತಹ ಹಕ್ಕುಗಳ ಬಗ್ಗೆ ಪ್ರತಿಪಾದಿಸಿದವರು

   - ಮಾನವತಾವಾದಿಗಳು

6. ಶಸ್ತ್ರಗಳನ್ನು ಹೊಂದಿದ ಈ ಜಗತ್ತು ಕೇವಲ ಹಣವನ್ನು ಮಾತ್ರ ಪೋಲು ಮಾಡುವುದಲ್ಲ ; ಬದಲಾಗಿ ಕಾರ್ಮಿಕರ ಬೆವರನ್ನು, ವಿಜ್ಞಾನಿಗಳ ಬುದ್ಧಿವಂತಿಕೆಯನ್ನು ಹಾಗೂ ಮಕ್ಕಳ ಆಸೆಗಳನ್ನು ವ್ಯಯಗೊಳಿಸುತ್ತದೆ." ಎಂದು ಹೇಳಿದವರು

   - ಐಸನ್ ಹೋವರ್

7. ಸಾರ್ವತ್ರಿಕ ಮಾನವ ಹಕ್ಕುಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದ ರಾಷ್ಟ್ರ ಯಾವುದು

   - ಭಾರತ

8. ತೃತೀಯ ಜಗತ್ತು ಎಂಬ ವಿಚಾರ ಯಾವ ಅಂಶವನ್ನು ಎತ್ತಿ ತೋರುತ್ತದೆ

   - ಬಡ ರಾಷ್ಟ್ರಗಳು

9. ಇದು ವಿಶ್ವದ ಇಂದಿನ ಹಾಗೂ ಮುಂದಿನ ಉಳಿವಿಗೆ ಅತ್ಯಗತ್ಯ ಎನಿಸುತ್ತದೆ

   - ನಿತ್ಯಸ್ತ್ರೀಕರಣ

10. ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ರಚಿಸಿದ ಆಯೋಗ

   - ಮಾನವ ಹಕ್ಕುಗಳ ಆಯೋಗ



Scanned with OKEN Scanner

11. ವಸಾಹತುಶಾಹಿತ್ವ ಹಾಗೂ ಸಾಮ್ರಾಜ್ಯಶಾಹಿತ್ವಕ್ಕೆ ಒಳಪಟ್ಟ ರಾಷ್ಟ್ರಗಳಲ್ಲಿ ಉಂಟಾದ ಪ್ರಮುಖ ಪರಿಣಾಮ

- ಆರ್ಥಿಕ ಅಸಮಾನತೆ

12. ಭಾರತ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತದೆ. ಏಕೆಂದರೆ

- ಭಾರತ ಶಾಂತಿಪ್ರಿಯ ರಾಷ್ಟ್ರ

13. ಯಾವ ವರ್ಷದ ಬಳಿಕ ಯು.ಎಸ್.ಎ ಮತ್ತು ಸೋವಿಯತ್ ರಷ್ಯಾ ನಿಶ್ಯಸ್ತ್ರೀಕರಣಕ್ಕಾಗಿ ಹಲವಾರು ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡವು

- **1963**

## ಅಧ್ಯಾಯ-22

## ಜಾಗತಿಕ ಸಂಸ್ಥೆಗಳು

1.ಮೊದಲನೆಯ ಮಹಾಯುದ್ಧದ ಬಳಿಕ ಜಾಗತಿಕ ಶಾಂತಿಗಾಗಿ ಯಾವ ಸಂಸ್ಥೆ ಪ್ರಾರಂಭವಾಯಿತು

- ಲೀಗ್ ಆಫ್ ನೇಶನ್ಸ್

2. ವಿಶ್ವ ಸಂಸ್ಥೆಯ ಸ್ಥಾಪನೆಗೆ ಕಾರಣರಾದ ನಾಯಕರ ಗುಂಪು TET 2020

- ವಿನ್‌ಸ್ಟನ್ ಚರ್ಚಿಲ್, ಜೋಸೆಫ್ ಸ್ಟಾಲಿನ್ ಹಾಗೂ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್



Scanned with OKEN Scanner

3. ಲೀಗ್ ಆಫ್ ನೇಶನ್ಸ್' ಪತನಕ್ಕೆ ಮುಖ್ಯ ಕಾರಣವೇನು

- ದ್ವಿತೀಯ ಮಹಾಯುದ್ಧದ ಪ್ರಾರಂಭ

4. ವಿಶ್ವಸಂಸ್ಥೆ ಎಂಬ ಶಬ್ದವನ್ನು ಯಾರು ಚಾಲ್ತಿಗೆ ತಂದರು

- ಪ್ರಾಂಕ್ಲಿನ್ ಡಿ'ರೂಸ್‌ವೆಲ್ಟ್,

5. ವಿಶ್ವಸಂಸ್ಥೆ ಯಾವಾಗ ಉದಯವಾಯಿತು

- 1945 ಅಕ್ಟೋಬರ್ 24

6. ಯಾವ ಸಮ್ಮೇಳನದಲ್ಲಿ ವಿಶ್ವಸಂಸ್ಥೆಯ ಸನ್ನದಿಗೆ ಸಹಿ ಹಾಕಲಾಯಿತು

- ಸ್ಯಾನ್ ಫ್ರಾನ್ಸಿಸ್ಕೋ

7. ಇಂದು ವಿಶ್ವ ಸಂಸ್ಥೆಯ ಸದಸ್ಯರ ಸಂಖ್ಯೆ ಎಷ್ಟು

- 193

8. ವಿಶ್ವಸಂಸ್ಥೆಯ ಇದರ ಮುಖ್ಯ ಕಛೇರಿ

- ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿದೆ

9. ಯಾವ ವಾಕ್ಯದೊಂದಿಗೆ ವಿಶ್ವಸಂಸ್ಥೆಯ ಪ್ರಸ್ತಾವನೆಯು ಪ್ರಾರಂಭಗೊಳ್ಳುತ್ತದೆ

- "ವಿಶ್ವದ ಜನಸಮುದಾಯವೆನಿಸಿದ ನಾವು"



Scanned with OKEN Scanner

10. ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ವಿಶ್ವ ಸಂಸ್ಥೆಯ ಅಂಗ ಸಂಸ್ಥೆ ಯಾವುದು

- ಸಾಮಾನ್ಯ ಸಭೆ

11. ವಿಶ್ವಸಂಸ್ಥೆಯ ಸಚಿವ ಸಂಪುಟ ಯಾವುದು

- ಭದ್ರತಾ ಸಮಿತಿ

12. ಸಾಮಾನ್ಯ ಸಭೆಯ ಉಪ ಸಂಸ್ಥೆ ಯಾವುದು

- ದತ್ತಿ ಸಮಿತಿ

13. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರದ ಅವಧಿ ಎಷ್ಟು

- 9 ವರ್ಷಗಳು

14. ಅಂತರರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಛೇರಿ

- ಹೇಗ್

15. ಸಚಿವಾಲಯದ ಮುಖ್ಯಸ್ಥರು ಯಾರು

- ಮಹಾಕಾರ್ಯದರ್ಶಿ

16. ಸಚಿವಾಲಯದ ಪ್ರಧಾನ ಕಾರ್ಯಾಲಯ ಎಲ್ಲಿದೆ

- ನ್ಯೂಯಾರ್ಕ್



Scanned with OKEN Scanner

17. ವಿಶ್ವ ಸಂಸ್ಥೆಯ ದಿನನಿತ್ಯದ ಆಡಳಿತಾತ್ಮಕ ಕಾರ್ಯ ಯೋಜನೆ ಹಾಗೂ ಸಾಂಸ್ಥಿಕ ಕಾರ್ಯಗಳು ಯಾರ ವ್ಯಾಪ್ತಿಯಲ್ಲಿ ಸೇರಿದೆ

- ಸಚಿವಾಲಯ

18. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ

- ರೋಮ್

19. ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ

- ಜಿನೇವಾ

20. ಯುನೆಸ್ಕೋ ಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ

- ಪ್ಯಾರಿಸ್

21. ಮಾನವೀಯ ದೃಷ್ಟಿಕೋನ ಹೊಂದಿದ ಸಂಸ್ಥೆ ಯಾವುದು

- ಯುನಿಸೆಫ್

22. 1965ರಲ್ಲಿ ನೋಬೆಲ್ ಬಹುಮಾನಗಳಿಸಿದ ಸಂಸ್ಥೆ ಯಾವುದು

- ಯುನಿಸೆಫ್

23. I.M.F ಮುಖ್ಯ ಕಛೇರಿ ಎಲ್ಲಿದೆ

- ವಾಷಿಂಗ್‌ಟನ್



Scanned with OKEN Scanner

24. I.B.R.D ಮುಖ್ಯ ಕಛೇರಿ ಎಲ್ಲಿದೆ

- ವಾಷಿಂಗ್ಟನ್

25. ಅಂತರರಾಷ್ಟ್ರೀಯ ಕಾರ್ಮಿಕ ಸಂಘದ ಮುಖ್ಯ ಕಛೇರಿ ಎಲ್ಲಿದೆ

- ಜಿನೇವಾ

26. ವಿಶ್ವ ವ್ಯಾಪಾರ ಸಂಘ ಸ್ಥಾಪನೆಯಾದ ವರ್ಷ

- 1995 ಜನವರಿ 1

27. ತೃತೀಯ ಆರ್ಥಿಕ ಆಧಾರ ಸ್ತಂಭ ಎಂದು ಯಾವುದನ್ನು ಕರೆಯುವರು

- ವಿಶ್ವ ವ್ಯಾಪಾರ ಸಂಘ

28. ಸಾರ್ಕ್ ಸಂಸ್ಥೆ ಯಾವಾಗ ಪ್ರಾರಂಭಗೊಂಡಿತು

- 1985

29. ಸಾರ್ಕ್ ಮುಖ್ಯ ಕಛೇರಿ ಎಲ್ಲಿದೆ

- ನೇಪಾಳದ ದೇಶದ ಕಠ್ಮಂಡು

30. ಯುರೋಪಿಯನ್ ಇಕನಾಮಿಕ್ ಕಮ್ಯುನಿಟೀಯವಾರಸುದಾರ ಸಂಸ್ಥೆ ಯಾವುದು?

- ಯುರೋಪಿಯನ್ ಯೂನಿಯನ್



Scanned with OKEN Scanner

# ಸಮಾಜಶಾಸ್ತ್ರ

## ಅಧ್ಯಾಯ – 23

## ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

1.ಪೂರ್ವ ಯೋಜನೆ ಇಲ್ಲದೆ, ಅನಿಶ್ಚಿತವಾಗಿ, ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯನ್ನು ಹೀಗೇನ್ನುವರು

- ಜನಮಂದೆ

2. ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹ

- ಜನಮಂದೆ

3. ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆ

- ದೊಂಬಿ

4. ಕೋಮುಗಲಭೆ,ಜನಾಂಗೀಯ ಕಲಹಗಳು ಗುಂಪು ಘರ್ಷಣೆ ಇದಕ್ಕೆ ಉದಾಹರಣೆ

- ದೊಂಬಿ

5. ಚಿಪ್ಕೋ ಚಳುವಳಿ ಆರಂಭವಾದದ್ದು

- ಉತ್ತರ ಪ್ರದೇಶದ ತೆ-ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ.

6.1973 ರಲ್ಲಿ ಚಿಪ್ಕೋ ಚಳುವಳಿ ಯಾರ ನೇತೃತ್ವದಲ್ಲಿ ನಡೆಯಿತು

- ಸುಂದರ್ ಲಾಲ್ ಬಹುಗುಣ ಹಾಗೂ ಚಂಡಿ ಪ್ರಸಾದ್ ಭಟ್ಟ



Scanned with OKEN Scanner

6. ಕರ್ನಾಟಕದಲ್ಲಿ ಅಪ್ಪಿಕೋ ಚಳುವಳಿಯು ನಡೆದದ್ದು

- ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮ, - 1983ರಲ್ಲಿ

7. ನರ್ಮದಾ ಅಂದೋಲನದ ನೇತೃತ್ವ ವಹಿಸದವರು

- ಮೇಧಾ ಪಾಟ್ಕರ್

8. ಸರ್ದಾರ್ ಸರೋವರ ಯೋಜನೆ ಇರುವ ರಾಜ್ಯ

- ಗುಜರಾತ್

9. ನರ್ಮದಾ ಬಚಾವೋ ಆಂದೋಲನವು ಈ ಅಣೆಕಟ್ಟು ನಿರ್ಮಾಣದ ವಿರುದ್ಧ ಜರುಗಿತು

- ಸರ್ದಾರ್ ಸರೋವರ

10. ಮೌನ ಕಣಿವೆ ಅಂದೋಲನ ಈ ರಾಜ್ಯಕ್ಕೆ ಸಂಬಂಧಿಸಿದೆ

- ಕೇರಳ

11. ಕೈಗಾ ಅಣು ಸ್ಥಾವರ ವಿರೋಧಿ ಚಳುವಳಿಯ ನಾಯಕತ್ವ ವಹಿಸಿದ್ದವರಾರು

- ಡಾ. ಶಿವರಾಮ ಕಾರಂತ

12. ನರ್ಮದಾ ಬಚಾವೋ ಆಂದೋಲನ ಯಾರ ನೇತೃತ್ವದಲ್ಲಿ ನಡೆಸಲಾಯಿತು

- ಮೇಧಾ ಪಾಟ್ಕರ್ ಮತ್ತು ಬಾಬಾ ಆಮ್ಟೆ



Scanned with OKEN Scanner

13. ಸ್ತ್ರೀಶಕ್ತಿ ಯೋಜನೆ'ಯ ಹೆಸರಿನಲ್ಲಿ ಕರ್ನಾಟಕದ ಮಹಿಳಾ ಸ್ವ-ಸಹಾಯ ಸಮೂಹಗಳು ಇತ್ತೀಚೆಗೆ ರಾಜ್ಯಾದ್ಯಂತ ಬಹಳ ಜನಪ್ರಿಯವಾಗುತ್ತಿವೆ.

## ಅಧ್ಯಾಯ - 24

## ಸಾಮಾಜಿಕ ಸವಾಲುಗಳು

1.'ಬಾಲಕಾರ್ಮಿಕ ನಿಷೇಧ ಕಾಯ್ದೆ' ಜಾರಿಗೆ ಬಂದ ವರ್ಷ

- 1986

2. ಸಂವಿಧಾನದ ಯಾವ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸಿದೆ

- 24ನೇ ವಿಧಿ

3. ಬಾಲ್ಯವಿವಾಹ ನಿಷೇಧ ಕಾಯಿದೆ ಜಾರಿಗೆ ಬಂದ ವರ್ಷ

- 2006

4. ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೆ ಬಂದ ವರ್ಷ

- 1961

5. ಭಾರತ ಸರ್ಕಾರವು ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಯಾವ ವರ್ಷ `ರಾಷ್ಟ್ರೀಯ ನೀತಿ' ಜಾರಿಗೊಳಿಸಿತು

- 1987



Scanned with OKEN Scanner

6. 2011ರ ಜನಗಣತಿಯ ಪ್ರಕಾರ ಪ್ರತಿ 1000 ಪುರುಷರಿಗೆ ಇರುವ ಹೆಣ್ಣು ಮಕ್ಕಳ ಪ್ರಮಾಣ – **940 ಹೆಣ್ಣು ಮಕ್ಕಳು**

7. 1994 ರಲ್ಲಿ 'ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆಯನ್ನು ಜಾರಿಗೆ ತರಲಾಯಿತು.



Scanned with OKEN Scanner

# ಭೂಗೋಳಶಾಸ್ತ್ರ

## ಅಧ್ಯಾಯ-25

## ಭಾರತದ ಭೂ ಬಳಕೆ ಹಾಗೂ ಕೃಷಿ

1.ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆ ಜೊತೆಯಾಗಿ ಸಾಗುವ ಕೃಷಿ ವಿಧಾನ

- ಮಿಶ್ರ ಬೇಸಾಯ

2. ಸಾಗುವಳಿಗೆ ಬಳಕೆಯಾಗದ ಭೂಮಿಯನ್ನು ಹೀಗೆನ್ನುವವರು

- ಪಾಳು ಭೂಮಿ

3. ಒಣ ಬೇಸಾಯ ಪದ್ಧತಿಯು ಭಾರತದಲ್ಲಿ ಹೆಚ್ಚಾಗಿ ಪರ್ಯಾಯ ಪ್ರಸ್ಥಭೂಮಿಯಲ್ಲಿ ಕಂಡು ಬರಲು ಕಾರಣ

- ನೀರಾವರಿ ಸೌಲಭ್ಯವಿರುವುದರಿಂದ

4. ಮುಂಗಾರು ಋತು : ನೆಲಕಡಲೆ : : ಹಿಂಗಾರು ಋತು

- ಗೋಧಿ

5. ಭಾರತದಲ್ಲಿ ರೂಢಿಯಲ್ಲಿರುವ ಈ ಬೇಸಾಯ ಪದ್ಧತಿಯು ವರ್ಷವಿಡೀ ಸಾಗುವಳಿಗಾಗಿ ಭೂಮಿ ಬಳಕೆ ಮಾಡಿಕೊಳ್ಳುವ ಲಕ್ಷಣವನ್ನು ಹೊಂದಿದೆ.

- ಸಾಂದ್ರ ಬೇಸಾಯ



Scanned with OKEN Scanner

6. ತೋಟಗಾರಿಕಾ ಬೇಸಾಯಕ್ಕೆ ಉದಾಹರಣೆ

- ಕಾಫಿ ಚಹಾಮತ್ತು ರಬ್ಬರ್

7. ಭತ್ತ, ರಾಗಿ, ಜೋಳ, ಹತ್ತಿ, ಜೋಳ , ಎಣ್ಣೆಕಾಳುಗಳು ಇವು ಈ ಬೆಳೆ ಋತುವಿಗೆ ಸಂಬಂಧಿಸಿವೆ

- ಮುಂಗಾರು ಅಥವಾ ಖಾರೀಫ್ ಬೆಳೆ ಋತು

8. ಗೋಧಿ, ಬಾರ್ಲಿ, ಕಡಲೆ, ನಾರಗಸೆ ಇವು ಈ ಬೆಳೆ ಋತುವಿಗೆ ಸಂಬಂಧಿಸಿವೆ

- ಹಿಂಗಾರು ಬೆಳೆ ಋತು

9. ಭಾರತದಲ್ಲಿಯೇ ಅತಿ ಹೆಚ್ಚು ಗೋಧಿ ಉತ್ಪಾದಿಸುವ ರಾಜ್ಯ ಯಾವುದು

- ಉತ್ತರ ಪ್ರದೇಶ

10. ದ್ವಿದಳ ಧಾನ್ಯಗಳದ ಉದ್ದು, ಹೆಸರು, ಎಣ್ಣೆಕಾಳುಗಳು ಮತ್ತು ತರಕರಿಗಳನ್ನು ಈ ಅವಧಿಯಲ್ಲಿ ಬೆಳೆಯುವರು

- ಬೇಸಿಗೆಯ ಅಥವಾ ಜೇಡ್ ಬೇಸಾಯ

11. ಆಹಾರ ಬೆಳೆಗಳು

- ಭತ್ತ - ಪ್ರಮುಖ ಖಾರಿಫ್ ಬೆಳೆಯಾಗಿದೆ
- ಪಶ್ಚಿಮ ಬಂಗಾಳ ರಾಜ್ಯವು ಅತಿ ಹೆಚ್ಚು ಭತ್ತವನ್ನು ಬೆಳೆಯುವ ರಾಜ್ಯವಾಗಿದೆ.
- ಗೋಧಿ - ಭಾರತದ ಚಳಿಗಾಲದ (ರಬಿ ) ಮುಖ್ಯ ಬೆಳೆಯಾಗಿದೆ
- "ಪಂಜಾಬ್ ಗೋಧಿಯ ಕಣಜ"ವೆನಿಸಿದೆ



Scanned with OKEN Scanner

## 12. ವಾಣಿಜ್ಯ ಬೆಳೆಗಳು

- ಕಬ್ಬು ಭಾರತದ ಅತಿಮುಖ್ಯ ವಾಣಿಜ್ಯ ಬೆಳೆಯಾಗಿದೆ.
- ಭಾರತದಲ್ಲಿ ಕಬ್ಬಿನ ಬೇಸಾಯವು ಅತೀ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ.
- ಕಬ್ಬು, ಅಫಿಸಿನೇರಮ್ ಗುಂಪಿಗೆ ಸೇರಿದ ಬಹು ವಾರ್ಷಿಕ ಸಸ್ಯ

**ಹೊಗೆಸೊಪ್ಪು** - ಹೊಗೆಸೊಪ್ಪನ್ನು ಬೀಡಿ, ಸಿಗರೇಟು, ಹುಕ್ಕಾ, ನಸ್ಯಗಳ ತಯಾರಿಕೆ ಹಾಗೂ ತಿನ್ನಲು ಬಳಸುತ್ತಾರೆ.

- ಕರ್ನಾಟಕದ ನಿಪ್ಪಾಣಿ ಬೆಳಗಾವಿ ಜಿಲ್ಲೆ ನಗರವು ಹೊಗೆಸೊಪ್ಪು ಮಾರುಕಟ್ಟೆ ಕೇಂದ್ರವಾಗಿದೆ.
- ಹೊಗೆಸೊಪ್ಪು 'ನಿಕೋಟಿಯಾನ' ವರ್ಗಕ್ಕೆ ಸೇರಿದ ಸಸ್ಯ

## 13. ನಾರಿನ ಬೆಳೆ

- ಹತ್ತಿ & ಸೆಣಬು
- ಇದನ್ನು ಮುಂಗಾರು (ಖಾರೀಫ್) ಬೆಳೆಯಾಗಿ ಬೆಳೆಯುತ್ತಾರೆ

## 14. ಪಾನೀಯ ಬೆಳೆ

- ಭಾರತವು ಉತ್ಪಾದಿಸುವ ಮುಖ್ಯ ತೋಟಗಾರಿಕಾ ಬೆಳೆಗಳಾದ ಚಹಾ ಮತ್ತು ಕಾಫಿ ಮುಖ್ಯ ಪಾನೀಯ ಬೆಳೆಗಳಾಗಿವೆ
- ಭಾರತವು ಚಹಾದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊದಲ ಸ್ಥಾನವನ್ನು ಪಡೆದಿದೆ.





Scanned with OKEN Scanner

## 15. ತೋಟಗಾರಿಕಾ ಅಥವಾ ಕೈತೋಟಗಾರಿಕೆ ಬೆಳೆಗಳು

- ಹಣ್ಣು, ತರಕಾರಿ ಹಾಗೂ ಹೂಗಳ ಉತ್ಪಾದನೆಗಳನ್ನು ಒಳಗೊಂಡಿದೆ.
- ಭಾರತದಲ್ಲಿ ಮಾವು, ಬಾಳೆ, ಸಪೋಟ ಹಾಗೂ ನಿಂಬೆ ಜಾತಿಯ ಹಣ್ಣುಗಳ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಮೊಲನೆಯ ಸ್ಥಾನದಲ್ಲಿದೆ
- ತೋಟಗಾರಿಕೆ ಬೇಸಾಯದ ಪ್ರದೇಶ ಹೊಂದಿರ ಈ ಪ್ರಗತಿಯನ್ನು 'ಸುವರ್ಣ ಕ್ರಾಂತಿ' ಎಂದು ಕರೆಯುವರು

## 16. ಪುಷ್ಪ ಬೇಸಾಯ

- ವಾಣಿಜ್ಯ ಮಾದರಿಯ ಪುಷ್ಪ (ಹೂವು) ಕೃಷಿ ಅಥವಾ ಬೇಸಾಯವನ್ನು ಫ್ಲೋರಿಕಲ್ಚರ್' ಎಂದು ಕರೆಯುವರು

## ಅಧ್ಯಾಯ - 26

## ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**1.ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದಿರು ಉತ್ಪಾದಿಸುವರಾಜ್ಯ ಯಾವುದು**

- ಒಡಿಶಾ

**2. ಪ್ರಮುಖವಾದ ಮಿಶ್ರಲೋಹ ಖನಿಜ ಯಾವುದು**

- ಮ್ಯಾಂಗನೀಸ್ ಅದಿರು



Scanned with OKEN Scanner

3. ಅಲ್ಯೂಮಿನಿಯಂ ಲೋಹ ತಯಾರಿಕೆಗೆ ಅಗತ್ಯವಾದ ಮುಖ್ಯ ಕಚ್ಚಾವಸ್ತು ಯಾವುದು

- ಬಾಕ್ಸೈಟ್

4. ಯಾವುದನ್ನು 20ನೇ ಶತಮಾನದ 'ಅದ್ಭುತ ಲೋಹ'ವೆಂದು ಕರೆಯಲಾಗುತ್ತದೆ

- ಬಾಕ್ಸೈಟ್ ಅದಿರು

5. ಪ್ರಮುಖ ಅಲೋಹ ಖನಿಜ ಯಾವುದು

- ಅಭ್ರಕ

6. ಭಾರತದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ರಾಜ್ಯ ಯಾವುದು

- ಆಂಧ್ರ ಪ್ರದೇಶ

7. 'ಕಾಗೆ ಬಂಗಾರ' ಎಂದು ಪ್ರಸಿದ್ಧಿ ಪಡೆದ ಖನಿಜ

- ಅಭ್ರಕ

8. ಭಾರತ ದೇಶದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ಪ್ರದೇಶ

- ಹಟ್ಟಿಗಣಿ

9. "ಕಪ್ಪು ಬಂಗಾರ" ಎಂದು ಕರೆಯುವ ಖನಿಜ

- ಕಲ್ಲಿದ್ದಲು



Scanned with OKEN Scanner

**10. ಜಾರ್ಖಂಡ, ಛತ್ತೀಸಘಡ್ ರಾಜ್ಯಗಳು ಅತಿ ಹೆಚ್ಚು ಕಲ್ಲಿದ್ದಲನ್ನು ಉತ್ಪಾದಿಸುವ ರಾಜ್ಯಗಳಾಗಿವೆ.**

**11. ಭಾರತದಲ್ಲಿ ಜಾರ್ಖಂಡ, ಒಡಿಶಾ ಮತ್ತು ಕರ್ನಾಟಕ ರಾಜ್ಯಗಳು ಅತಿ ಹೆಚ್ಚು ಕಬ್ಬಿಣದ ಅದಿರಿನ ನಿಕ್ಷೇಪವನ್ನು ಹೊಂದಿರುವ ರಾಜ್ಯಗಳಾಗಿವೆ.**

**12. ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಮೊಟ್ಟಮೊದಲು ಎಲ್ಲಿ ಪತ್ತೆ ಮಾಡಲಾಯಿತು**

- ಅಸ್ಸಾಂನ ದಿಗ್ಬಾಯ್

**13. ಭಾರತದ ಅತಿ ದೊಡ್ಡ ತೈಲ ನಿಕ್ಷೇಪವಾಗಿದೆ**

- 'ಬಾಂಬೆ ಹೈ'
- 'ಬಾಂಬೆ ಹೈ' ನಲ್ಲಿ ತೈಲವನ್ನು ಪತ್ತೆಮಾಡಿ 1976 ರಲ್ಲಿ ತೈಲೋತ್ಪಾದನೆಯನ್ನು ಪ್ರಾರಂಭಿಸಲಾಯಿತು

**14. ಭಾರತದಲ್ಲಿ ಕಂಡು ಬರುವ ಪರಮಾಣು ಖನಿಜಗಳಲ್ಲಿ ಯುರೇನಿಯಂ, ಹೋರಿಯಂ, ಜೆರಿಲಿಯಂ, ಲಿಥಿಯಂ ಪ್ರಮುಖವಾಗಿದೆ**

**15. ಪುನರ್ ಬಳಕೆ ಮಾಡಬಹುದಾದ ಶಕ್ತಿ ಮೂಲಗಳು**

- ಸೌರಶಕ್ತಿ
- ಪವನ ಶಕ್ತಿ
- ಸಾಗರನೀರಿನ ಉಬ್ಬರ ಇಳಿತ ಶಕ್ತಿ



Scanned with OKEN Scanner

- ಭೂ ಅಂತರಾಳದ ಶಕ್ತಿ
- ಜೈವಿಕ ಅನಿಲ ಶಕ್ತಿ

16. ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದ ಕೇಂದ್ರವನ್ನು ಎಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ

- ರಾಜಸ್ತಾನದ ಬಾರ್‌ಮರ್

## ಅಧ್ಯಾಯ - 27

## ಭಾರತದ ಸಾರಿಗೆ ಹಾಗೂ ಸಂಪರ್ಕ

1.ಭಾರತವು ಸುಮಾರು 70,934 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ಮಾರ್ಗಗಳನ್ನು ಒಳಗೊಂಡಿದೆ

2. ಭಾರತ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ವನ್ನು ಸ್ಥಾಪಿಸಿದ ವರ್ಷ

- 1989

3. ಭಾರತದ ಅತಿ ಉದ್ದವಾದ ರಾಷ್ಟ್ರೀಯ ಹೆದ್ದಾರಿ

- ವಾರಣಾಸಿಯಿಂದ ಕನ್ಯಾಕುಮಾರಿಯವರೆಗೆ
- ರಾಷ್ಟ್ರೀಯ ಹೆದ್ದಾರಿ ಸಂಖ್ಯೆ - NH 7



Scanned with OKEN Scanner

4. ಇದು ಜಗತ್ತಿನ ಎತ್ತರವಾದ ರಸ್ತೆ ಮಾರ್ಗವಾಗಿದೆ

- ಕುಲುಮನಾಲಿ (ಹಿಮಾಚಲಪ್ರದೇಶ) ಮತ್ತು ಲ್ಹೇ (ಕಾಶ್ಮೀರ)ಗಳನ್ನು ಸಂಪರ್ಕಿಸುವ ಹೆದ್ದಾರಿ 4267 ಮೀ ಎತ್ತರದಲ್ಲಿದೆ

5. ಸುವರ್ಣ ಚತುಷ್ಕೋನ ಮತ್ತು ಕಾರಿಡಾರ್ ಹೆದ್ದಾರಿಗಳು ಈ ಯೋಜನೆಯು ಚತುಷ್ಪಥ/ಷಟ್ಪಥ ರಸ್ತೆಗಳನ್ನು ಹೊಂದಿದು

15000 ಕಿ.ಮೀ. ಗಳಷ್ಟು ಉದ್ದವಾಗಿರುವ ರಾಷ್ಟ್ರೀಯ ಹೆದ್ದಾರಿಯಾಗಿದೆ

6. ಸುವರ್ಣ ಚತುಷ್ಕೋನ ಮತ್ತು ಕಾರಿಡಾರ್ ಹೆದ್ದಾರಿ ಯೋಜನೆಯನ್ನು ಆರಂಭಿಸಿದ ವರ್ಷ

- 1999

7. ಸುವರ್ಣ ಚತುಷ್ಕೋನ ಹೆದ್ದಾರಿಯು ಸಂಪರ್ಕಿಸುವ ನಗರಗಳ ಗುಂಪು

- ದೆಹಲಿ, ಮುಂಬಯಿ ಬೆಂಗಳೂರು, ಚೆನ್ನೈ, ಕೊಲ್ಕತ್ತಾ ನಗರಗಳನ್ನು ಸಂಪರ್ಕಿಸುತ್ತವೆ.

## ಭಾರತದ ಪ್ರಮುಖ ಬಂದರುಗಳು

- ಕಾಂಡ್ಲಾ – ಇದು ಕಚ್ ಖಾರಿಯ ಶಿರೋಭಾಗದಲ್ಲಿದೆ.
- ಮುಂಬಯಿ - ಇದು ಮಹಾರಾಷ್ಟ್ರ ರಾಜ್ಯದಲ್ಲಿದೆ, ಈ ಬಂದರು ಹೆಚ್ಚಿನ ಒತ್ತಡವನ್ನು ಹೊಂದಿದ್ದರಿಂದ ಈ ಬಂದರಿನ ಅಚೆಗೆ ನವಾಶೇವಾ ಎಂಬ ಬಂದರನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆನಿರ್ಮಿಸಲಾಗಿದೆ. ಮುಂಬೈ ಬಂದರನ್ನು 'ಭಾರತದ ಹೆಬ್ಬಾಗಿಲು' ಎಂದು ಕರೆಯುತ್ತೇವೆ.



Scanned with OKEN Scanner

- **ಮರ್ಮಗೋವಾ** – ಈ ಬಂದರು ಗೋವಾ ರಾಜ್ಯದ ಝುವಾರಿ ಕೊಲ್ಲಿಯ ಪ್ರದೇಶದಲ್ಲಿದೆ.
- **ನವ ಮಂಗಳೂರು** - ಕರ್ನಾಟಕ ರಾಜ್ಯದಲ್ಲಿದ್ದು, ಕರ್ನಾಟಕದ ಪ್ರಮುಖ ಬಂದರಾಗಿದೆ.
- **ಕೊಚ್ಚಿ** – ಇದು ಕೇರಳ ರಾಜ್ಯದಲ್ಲಿದೆ
- **ತುತುಕುಡಿ** – ಇದು ತಮಿಳುನಾಡು ರಾಜ್ಯದಲ್ಲಿದೆ.
- **ಚೆನ್ನೈ** - ಈ ಬಂದರು ಕೃತಕ ಬಂದರಾಗಿದ್ದು ಹಳೆಯ ಬಂದರುಗಳಲ್ಲಿ ಒಂದು. ಇದು ಕೂಡಾ ತಮಿಳುನಾಡು ರಾಜ್ಯದಲ್ಲಿದೆ
- **ವಿಶಾಖ ಪಟ್ಟಣ** - ಇದು ನೈಸರ್ಗಿಕ ಬಂದರಾಗಿದ್ದು ಆಂಧ್ರಪ್ರದೇಶ ರಾಜ್ಯದಲ್ಲಿದೆ.
- **ಪಾರಾ ದೀಪ** - ಒಡಿಸ್ಸಾ ರಾಜ್ಯದಲ್ಲಿದ್ದು, ಇತ್ತೀಚೆಗೆ ಅಭಿವೃದ್ಧಿ ಪಡಿಸಿದ ಬಂದರಾಗಿದೆ
- **ಕೊಲ್ಕತ್ತಾ** – ಇದು ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ. ಇದು ನೈಸರ್ಗಿಕ ರೇವು ಪಟ್ಟಣವಾಗಿರುತ್ತದೆ. ಈ ಬಂದರನ್ನು 'ಭಾರತದ ಚಹದ ಬಂದರು' ಎಂದು ಕರೆಯಲಾಗಿದೆ.
- **ಹಾಲ್ದಿಯಾ** - ಕೊಲ್ಕಾತ್ತಾದ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರಾಗಿರುತ್ತದೆ. ಇದೂ ಕೂಡಾ ಪಶ್ಚಿಮ ಬಂಗಾಳ ರಾಜ್ಯದಲ್ಲಿದೆ

### ಭಾರತದ ಪ್ರಮುಖ ವಿಮಾನ ನಿಲ್ದಾಣಗಳು

- **ಮುಂಬೈ** - ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಸಹರಾ & ಸಂತ್ರಾ ಕ್ರೂಜ ) ಇನ್ನೊಂದು ಹೆಸರು
- **ದೆಹಲಿ** - ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ



Scanned with OKEN Scanner

- ಕೋಲ್ಕತ್ತಾ - ನೇತಾಜಿ ಸುಭಾಷ್ ಚಂದ್ರ ಬೋಸ್ ವಿಮಾನ ನಿಲ್ದಾಣ
- ಚೆನ್ನೈ- ಅಣ್ಣಾ ಅಥವಾ ಮೀನಂಬಾಕಂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
- ಹೈದರಾಬಾದ್ - ರಾಜೀವ್‌ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

## ಅಧ್ಯಾಯ 28

## ಭಾರತದ ಪ್ರಮುಖ ಕೈಗಾರಿಕೆಗಳು

1.ಕೈಗಾರಿಕೆ ಪದದ ಅರ್ಥವು ಹೀಗಿದೆ

- ಕಚ್ಚಾ ವಸ್ತುವನ್ನು ಹೆಚ್ಚು ಉಪಯುಕ್ತ ವಸ್ತುವಾಗಿ ಪರಿವರ್ತಿಸುವ ಪ್ರಕ್ರಿಯೆ

2. ಎಲ್ಲಾ ಬಗೆಯ ಕೈಗಾರಿಕೆಗಳಿಗೂ ಮೂಲ ಕೈಗಾರಿಕೆ ಇದಾಗಿದೆ

- ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ

3. ಭಾರತದ ಮೊಟ್ಟಮೊದಲ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಆರಂಭವಾದದ್ದು

- ಪಶ್ಚಿಮ ಬಂಗಾಳದ 'ಕುಲ್ಟಿ '(1870) ಎಂಬಲ್ಲಿ ಬೆಂಗಾಲ್ ಐರನ್ ಕಂಪನಿ ಲಿ. ಸಂಸ್ಥೆಯಿಂದ ಸ್ಥಾಪಿತಗೊಂಡಿತು

4. ಮೈಸೂರು ರಾಜ ಸಂಸ್ಥಾನವು ದಿ ಮೈಸೂರ್ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಕೈಗಾರಿಕೆಯನ್ನು ಭದ್ರಾವತಿಯಲ್ಲಿ ಸ್ಥಾಪಿಸಿದ ವರ್ಷ

- 1923



Scanned with OKEN Scanner

5. ಹೊಂದಿಸಿ ಬರೆಯಿರಿ

- ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (Tisco) - ಜಮ್‌ಶೆಡ್‌ಪುರ (ಜಾರ್ಖಂಡ್)
- ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪನಿ (IISCO) - ಬರ್ನಪುರ (ಪಶ್ಚಿಮ ಬಂಗಾಳ)
- ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಂಪನಿ (VISCO) - ಭದ್ರಾವತಿ ಕರ್ನಾಟಕ
- ಐರನ್ ಮತ್ತು ಸ್ಟೀಲ್ ಕಂಪನಿ - ದುರ್ಗಾಪುರ (ಪಶ್ಚಿಮ ಬಂಗಾಳ)

6. "ಭಾರತದ ಕಾಟನೊಪೊಲೀಸ್' ಮತ್ತು 'ಭಾರತದ ಮಾಂಚೆಸ್ಟರ್ ಎಂದು ಯಾವ ನಗರವನ್ನು ಕರೆಯಲಾಗಿದೆ

- ಮುಂಬಯಿ

7. ಭಾರತದ ಜಾವಾ ಎಂದು ಯಾವ ಪ್ರದೇಶವನ್ನು ಕರೆಯುತ್ತಾರೆ

- ಉತ್ತರ ಪ್ರದೇಶದ ಗೋರಖಪುರ

8. ಅಲ್ಯೂಮಿನಿಯಂ 1886 ರಲ್ಲಿ ಶೋಧಿಸಲ್ಪಟ್ಟಿತು

9. ಭಾರತದಲ್ಲಿ ಮೊದಲ ಕಾಗದದ ಕೈಗಾರಿಕೆಯು ಎಲ್ಲಿ ಸ್ಥಾಪನೆಗೊಂಡಿತು

- ಪಶ್ಚಿಮ ಬಂಗಾಳದ ಸೆರಾಂಪುರ (1840) ಹೂಗ್ಲಿ ನದಿ ದಡದಲ್ಲಿ



Scanned with OKEN Scanner

- 1867 ರಲ್ಲಿ ಮತ್ತೊಂದು ಕಾರ್ಖಾನೆಯು ಕೋಲ್ಕತ್ತಾದ ಬಳಿಯಿರುವ ಬಾಲ್ಲಿ ನಗರದಲ್ಲಿ ಆರಂಭಗೊಂಡಿತು

10. ಭಾರತದ 'ಸಿಲಿಕಾನ್ ವ್ಯಾಲಿ' ಎಂದು ಯಾವ ನಗರವನ್ನು ಕರೆಯಲಾಗಿದೆ

- ಬೆಂಗಳೂರು

11. ಭಾರತ ಸರಕಾರವು ಸಾಧ್ಯವೇ ಉದ್ಯಮ ಬೆಳವಣಿಗೆಯನ್ನು ಪ್ರೋತ್ಸಾಹಿಸಿ ರವನ್ನು ಉತ್ತೇಜಿಸಲು ಸಾಫ್ಟವೇರ್, ಟೆಕ್ನಾಲಜಿ ಪಾರ್ಕಗಳನ್ನು (STP) 1991 ರಲ್ಲಿಯೇ ಸ್ಥಾಪಿಸಿತು

12. ಭಾರತ ಸರಕಾರವು 1980 ರಲ್ಲಿ ಜೈವಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಪ್ರತ್ಯೇಕವಾದ ಸಂಸ್ಥೆಯನ್ನು ಹುಟ್ಟುಹಾಕಿತು

13. ಕಾನೂನಾತ್ಮಕವಾಗಿ ಕೇಂದ್ರ ಸರಕಾರವು ನವಂಬರ್ 1990 ರಲ್ಲಿ (Advanced Technology Attachment) "ಉನ್ನತ ತಂತ್ರಜ್ಞಾನದ" ಬಳಕೆಯನ್ನು ಅಧಿಕೃತವಾಗಿ ಜಾರಿಗೆ ತಂದಿತು



Scanned with OKEN Scanner

## ಅಧ್ಯಾಯ – 29

## ನೈಸರ್ಗಿಕ ವಿಕೋಪಗಳು

**1.ಭಾರತದಲ್ಲಿ ಹೆಚ್ಚಾಗಿ ಯಾವ ಬಗೆಯ ಆವರ್ತ ಮಾರುತಗಳು ಸಂಭವಿಸುತ್ತವೆ**

- **ಉಷ್ಣ ವಲಯದ**

**2.ಸಾಮಾನ್ಯವಾಗಿ ಉಷ್ಣವಲಯದ ಆವರ್ತ ಮಾರುತಗಳು ಈ ತಿಂಗಳುಗಳಲ್ಲಿ ಹೆಚ್ಚಾಗಿ ಸಂಭವಿಸುತ್ತವೆ**

- **ಅಕ್ಟೋಬರ್-ನವಂಬರ್**

**3. ಅತ್ಯಧಿಕ ಮಳೆ, ಹಿಮ ಕರಗುವಿಕೆ, ಮೇಘ ಸ್ಫೋಟ ಇವು ಯಾವ ನೈಸರ್ಗಿಕ ವಿಕೋಪಕ್ಕೆ ಕಾರಣಗಳಾಗಿವೆ**

- **ಪ್ರವಾಹಗಳು**

**4. ಭಾರತದಲ್ಲಿ ಇಲ್ಲಿಯವರೆಗೆ ಸಂಭವಿಸಿರುವ ಭೂಕಂಪನಗಳಿಗೆ ಪ್ರಮುಖ ಕಾರಣವೇನು**

- **ಭೂಫಲಕಗಳ ಚಲನೆ**

**5. ಭಾರತದಲ್ಲಿ ಯಾವ ವಲಯವನ್ನು ಕನಿಷ್ಟ ಭೂಕಂಪ ತೀವ್ರತೆಯ ವಲಯ ಎಂದು ಪರಿಗಣಿಸಲಾಗಿದೆ**

- **ಪರ್ಯಾಯ ದ್ವೀಪವಲಯ**

**6. ಭಾರತದಲ್ಲಿ ಹೆಚ್ಚು ತೀವ್ರತೆಯುಳ್ಳ ಭೂಕಂಪನ ವಲಯ**

- **ಹಿಮಾಲಯ ವಲಯ**



Scanned with OKEN Scanner

7. ಅಣೆಕಟ್ಟುಗಳ ನಿರ್ಮಾಣ, ಅರಣ್ಯ ಬೆಳೆಸುವುದು, ಒಡ್ಡುಗಳ ನಿರ್ಮಾಣ, ಮುನ್ಸೂಚನೆ ನೀಡುವುದು ಇವು ಇದರ ನಿಯಂತ್ರಣ ಕ್ರಮಗಳು

- ಪ್ರವಾಹ ನಿಯಂತ್ರಣ

8. ಜ್ವಾಲಾಮುಖಿ, ಶಿಲಾ ಸ್ತರಭಂಗ, ಭೂ ಕುಸಿತಗಳು ಬಹುಮುಖ್ಯವಾಗಿ ಈ ಕೆಳಗಿನ ವಿಪತ್ತಿಗೆ ಕಾರಣಗಳಾಗಿವೆ

- ಭೂಕಂಪಗಳು

9. ಸುನಾಮಿಯು ಉಗಮವಾಗುವುದು

- ಸಮುದ್ರದಲ್ಲಿ

10. ಸಮುದ್ರದ ಅಲೆಗಳ ಅವಿರತ ಸಂಘರ್ಷಣಾ ಪ್ರಕ್ರಿಯೆಯಿಂದ ತೀರವು ಸವೆಯುವ & ವಸ್ತುಗಳ ಒಯ್ಯುವಿಕೆಗೆ

- ಕಡಲ ಕೊರೆತ

11. ಸಮುದ್ರ ತೀರದುದ್ದಕ್ಕೂ ಮ್ಯಾಂಗ್ರೂವ್ ಕಾಡುಗಳನ್ನು ಬೆಳೆಸಲು ಕಾರಣವೇನು

- ಕಡಲ ಕೊರೆತ ನಿಯಂತ್ರಣ

12. ಚಂಡ ಮಾರುತಗಳು ಬಂಗಾಳಕೊಲ್ಲಿಯಲ್ಲಿ ಉಗಮಗೊಳ್ಳುತ್ತವೆ. ಮೂರು ಕಡೆಗಳಲ್ಲಿ ಭೂಭಾಗವಿದ್ದು

● ಭೂಮಿ ಸಾಗರ ಭಾಗಗಳ ನಡುವೆ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದು ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲು ಕಾರಣವಾಗಿವೆ



Scanned with OKEN Scanner

# ಅರ್ಥಶಾಸ್ತ್ರ

## ಅಧ್ಯಾಯ - 30

## ಗ್ರಾಮೀಣಾಭಿವೃದ್ಧಿ

1.2011 ರ ಜನಗಣತಿ ಪ್ರಕಾರ ಭಾರತದಲ್ಲಿ ಹಳ್ಳಿಗಳಲ್ಲಿ ವಾಸಿಸುವ ಜನರ ಪ್ರಮಾಣ ಎಷ್ಟು

- ಶೇ 68.84

2. ಭಾರತದ ನೈಜ ಅಭಿವೃದ್ಧಿ ಎಂದರೆ ಗ್ರಾಮಗಳ ಅಭಿವೃದ್ಧಿ ಎಂದು ಹೇಳಿದವರಾರು

- ಮಹಾತ್ಮ ಗಾಂಧೀಜಿ

3. ಎಷ್ಟನೇ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಜಾರಿಗೆ ತರಲಾಯಿತು

- 73ನೇ ತಿದ್ದುಪಡಿ

4. ಭಾರತಿಯ ಸಂವಿಧಾನಕ್ಕೆ 73ನೇ ತಿದ್ದುಪಡಿ ಯಾವ ವರ್ಷ ಮಾಡಲಾಯಿತು

- 1993

5. ಗ್ರಾಮ ಪಂಚಾಯಿತಿಯ ಅತ್ಯಂತ ಮಹತ್ವದ ಸಂಸ್ಥೆಯಾವುದು

- ಗ್ರಾಮಸಭೆ



Scanned with OKEN Scanner

6. ಗ್ರಾಮಸಭೆಯು ಕನಿಷ್ಠ ಎಷ್ಟು ತಿಂಗಳಿಗೊಮ್ಮೆ ಅದರ ಸಭೆ ನಡೆಸಬೇಕು

- 6 ತಿಂಗಳು

7. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಯಾವುದರ ನಿರ್ಮೂಲನೆಗೆ ಜಾರಿಗೆ ತರಲಾಗಿದೆ

- ಬಡತನ ಮತ್ತು ನಿರುದ್ಯೋಗ

8. ಪಂಚಾಯತ್ ರಾಜ್ ಸಂಸ್ಥೆಗಳು ಯಾವ ತತ್ವಗಳಡಿಯಲ್ಲಿ ಕಾರ್ಯನಿರ್ವಹಿಸುತ್ತವೆ

- ಪ್ರಜಾಪ್ರಭುತ್ವ ತತ್ವಗಳಡಿ

9. ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಇರಬೇಕಾದ ಮಹಿಳಾ ಸದಸ್ಯರ ಪ್ರಮಾಣ ಎಷ್ಟು

- ಅರ್ಧಕ್ಕಿಂತ ಹೆಚ್ಚು

10. ಗ್ರಾಮೀಣಾಭಿವೃದ್ಧಿಯಿಂದ ರಾಜ್ಯದ ಅಭಿವೃದ್ಧಿಯಾಗುತ್ತದೆ. ಹೇಗೆಂದರೆ

- ಅದು ಕೃಷಿ & ಕೃಷಿಯೇತರ ವಲಯಗಳ ಅಭಿವೃದ್ಧಿಯನ್ನು ಒಳಗೊಂಡಿದೆ

11. ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು

- 1993



Scanned with OKEN Scanner

**12.** ಪಂಚಾಯಿತಿಯನ್ನು ವಿಸರ್ಜಿಸಿದ ಎಷ್ಟು ತಿಂಗಳಿನೊಳಗೆ ಕಡ್ಡಾಯವಾಗಿ ಚುನಾವಣೆ ನಡೆಸಬೇಕು

- 6 ತಿಂಗಳು

**13.** ವಿಕೇಂದ್ರೀಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು. ಇದನ್ನೇ ಗಾಂಧೀಜಿಯವರು ಏನೆಂದು ಕರೆದರು

- ಗ್ರಾಮ ಸ್ವರಾಜ್ಯ

**14.** ಪ್ರತಿ ಗ್ರಾಮದ ಆಡಳಿತಾಧಿಕಾರ ಹಾಗೂ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವದನ್ನು ಏನೆಂದು ಕರೆಯುತ್ತಾರೆ

- ವಿಕೇಂದ್ರೀಕರಣ

**15.** ವಿಕೇಂದ್ರೀಕರಣಕ್ಕಾಗಿ ಯಾವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ

- ಪಂಚಾಯತ್ ರಾಜ್ ವ್ಯವಸ್ಥೆ

**16.** ಗ್ರಾಮೀಣ ಭಾಗದ ಎಲ್ಲಾ ಹಳ್ಳಿಗಳಲ್ಲಿ 'ಮಹಿಳಾ ಸ್ವಸಹಾಯ ಸಂಘ' (ಸ್ತ್ರೀಶಕ್ತಿ ಸಂಘ)ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ ಇದರ ಉದ್ದೇಶ

- ಇವು ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ.



Scanned with OKEN Scanner

# ಅಧ್ಯಾಯ -31

## ಸಾರ್ವಜನಿಕ ಹಣಕಾಸು ಮತ್ತು ಆಯ-ವ್ಯಯ

1.ವೈಯಕ್ತಿಕ ಅಥವಾ ಖಾಸಗೀ ಹಣಕಾಸು ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ-ವೆಚ್ಚಗಳಿಗೆ ಸಂಬಂಧಿಸಿದೆ

- ವೈಯಕ್ತಿಕ ಹಣಕಾಸು

2. ಸರ್ಕಾರದ ವರಮಾನ, ವೆಚ್ಚ ಹಾಗೂ ಸಾಲಗಳ ನಿರ್ವಹಣೆ ಕುರಿತ ಅಧ್ಯಯನವನ್ನು ಹೀಗೆನ್ನುವರು

- ಸಾರ್ವಜನಿಕ ಹಣಕಾಸು

3. ಭಾರತದಲ್ಲಿ ಹಣಕಾಸು ವರ್ಷದ ಪ್ರಾರಂಭ & ಮುಕ್ತಾಯದ ಅವಧಿ

- ಏಪ್ರಿಲ್ 1 ರಿಂದ ಮಾರ್ಚ್ 31

4. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕ ಸಭೆಯಲ್ಲಿ ಮಂಡಿಸುವವರು

- ಹಣಕಾಸು ಸಚಿವರು
- ಭಾರತದಲ್ಲಿ ಕೇಂದ್ರ ಸರ್ಕಾರದ ಆಯ-ವ್ಯಯವನ್ನು ಕೇಂದ್ರ ಹಣಕಾಸು ಸಚಿವರು ಹಣಕಾಸು ಇಲಾಖೆಯ ಸಹಕಾರದೊಂದಿಗೆ ತಯಾರಿಸುತ್ತಾರೆ.



Scanned with OKEN Scanner

5. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ರಾಷ್ಟ್ರಗಳಿಗೆ ಅಧಿಕ ಪ್ರಮಾಣದ ವೆಚ್ಚ ಮಾಡಿ ಅಭಿವೃದ್ಧಿ ಸಾಧಿಸಲು ಹೆಚ್ಚು ಸೂಕ್ತವಾದ ಆಯವ್ಯಯ

- ಕೊರತೆಯ ಆಯವ್ಯಯ

6. 20ನೇ ಶತಮಾನದಲ್ಲಿ ಕಲ್ಯಾಣ ರಾಜ್ಯಗಳ ಉದಯದೊಂದಿಗೆ ಆಧುನಿಕ ಸರ್ಕಾರಗಳ ಕಾರ್ಯಕ್ಷೇತ್ರಗಳ ವಿಸ್ತರಣೆಯ ಪರಿಣಾಮವಿದು

- ಸಾರ್ವಜನಿಕ ವೆಚ್ಚದ ಹೆಚ್ಚಳ

7. ಸರ್ಕಾರದ ವರಮಾನಕ್ಕಿಂತ ವೆಚ್ಚವು ಹೆಚ್ಚಾಗಿದ್ದರೆ

- ಕೊರತೆಯ ಆಯವ್ಯಯ

8. ಸರ್ಕಾರದ ಕಂದಾಯ ವರಮಾನದ ಮೂಲ

- ತೆರಿಗೆ & ತೆರಿಗೆಯೇತರ ಆದಾಯ

9. ಕಂದಾಯ ವೆಚ್ಚಗಳಿಗೆ ಉದಾಹರಣೆ

- ರಾಷ್ಟ್ರರಕ್ಷಣೆ, ಆಡಳಿತ, ಬಡ್ಡಿ ಪಾವತಿ, ರಾಜ್ಯಗಳಿಗೆ ಅನುದಾನ

10. ಯೋಜನಾ ವೆಚ್ಚಗಳಿಗೆ ಉದಾಹರಣೆ

- ಆರ್ಥಿಕ ಸೇವೆಗಳು :ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ಸಾರಿಗೆ, ಸಂಪರ್ಕ, ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ
- ಸಾಮಾಜಿಕ ಸೇವೆಗಳು : ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು ಪೂರೈಕೆ, ಗೃಹ ನಿರ್ಮಾಣ, ಸಾಮಾಜಿಕ ಕಲ್ಯಾಣ



Scanned with OKEN Scanner

- **ಸಾಮಾನ್ಯ ಸೇವೆಗಳು :** ದೇಶದಲ್ಲಿ ಶಾಂತಿ- ಸುವ್ಯವಸ್ಥೆ ಕಾಪಾಡಲು ಮಾಡುವ ವೆಚ್ಚಗಳು,

**11. ಯೋಜನೇತರ ವೆಚ್ಚಗಳಿಗೆ ಉದಾಹರಣೆ**

- ನಾಗರಿಕ ಆಡಳಿತ ವೆಚ್ಚ, ರಕ್ಷಣಾ ವೆಚ್ಚ ಬಡ್ಡಿ ಪಾವತಿ ರಾಜ್ಯಗಳಿಗೆ ಯೋಜನೇತರ ಸಹಾಯ, ಸಹಾಯಧನದ ಮೇಲಿನ ವೆಚ್ಚ

**12. ಬಂಡವಾಳ ವೆಚ್ಚಗಳಿಗೆ ಉದಾಹರಣೆ**

- ಕೃಷಿ, ಕೈಗಾರಿಕೆ, ಸಾರಿಗೆ, ವಿದ್ಯುತ್, ನೀರಾವರಿ ಯೋಜನೆಗಳು

**13. ಪ್ರಮುಖ ಪ್ರತ್ಯಕ್ಷ ತೆರಿಗೆಗಳನ್ನು ಹೆಸರಿಸಿ.**

- ವರಮಾನ ತೆರಿಗೆ
- ಕಂಪನಿ ತೆರಿಗೆ
- ಸಂಪತ್ತಿನ ತೆರಿಗೆ
- ಸ್ಟಾಂಪ್ ಶುಲ್ಕ

**14. ಪ್ರಮುಖ ಪರೋಕ್ಷ ತೆರಿಗೆಗಳನ್ನು ಹೆಸರಿಸಿ.**

- ಕೇಂದ್ರ ಅಬಕಾರಿ ತೆರಿಗೆ
- ಮೌಲ್ಯವರ್ಧಿತ ತೆರಿಗೆ
- ಆಮದು ರಫ್ತು ತೆರಿಗೆ
- ಸೇವಾ ತೆರಿಗೆ



Scanned with OKEN Scanner

15. ಕೇಂದ್ರ ಸರ್ಕಾರದ ತೆರಿಗೆಯೇತರ ವರಮಾನದ ಮೂಲಗಳನ್ನು ತಿಳಿಸಿ

GPSTR 2022 ಇಲಾಖೆ ಮಾದರಿ

- ಭಾರತೀಯ ರಿಸರ್ವ್ ಬ್ಯಾಂಕು ಗಳಿಸುವ ನಿವ್ವಳ ಲಾಭ
- ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ
- ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ
- ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ
- ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
- ವಿವಿಧ ರೀತಿಯ ಶುಲ್ಕಗಳು, ದಂಡಗಳು ಇತ್ಯಾದಿ

16. ವಿತ್ತೀಯ ಕೊರತೆಯ ಸೂತ್ರ ಬರೆಯಿರಿ.

- ವಿತ್ತೀಯ ಕೊರತೆ = (ಕಂದಾಯ ವರಮಾನ + ಸಾಲೇತರ ಬಂಡವಾಳ ವರಮಾನ) - ಒಟ್ಟು ವೆಚ್ಚ

17. ರೆವೆನ್ಯೂ ಕೊರತೆಯ ಸೂತ್ರ ಬರೆಯಿರಿ. GPSTR 2022 ಇಲಾಖೆ ಮಾದರಿ

- ರೆವೆನ್ಯೂ ಕೊರತೆ = ರೆವೆನ್ಯೂ ಖಾತೆಯ ವರಮಾನ - ರೆವೆನ್ಯೂ ಖಾತೆಯ ವೆಚ್ಚ

18. ಪ್ರಾಥಮಿಕ ಕೊರತೆಯ ಸೂತ್ರ ಬರೆಯಿರಿ.

- ಪ್ರಾಥಮಿಕ ಕೊರತೆ = ವಿತ್ತೀಯ ಕೊರತೆ - ಬಡ್ಡಿಪಾವತಿ

19. ಆಯ-ವ್ಯಯ ಕೊರತೆಯ ಸೂತ್ರ ಬರೆಯಿರಿ

- ಆಯವ್ಯಯ ಕೊರತೆ = ಒಟ್ಟು ಆದಾಯ - ಒಟ್ಟು ವೆಚ್ಚ





Scanned with OKEN Scanner

**20. ಕಂದಾಯ ಕೊರತೆಯ ಸೂತ್ರ ಬರೆಯಿರಿ**

- ಕಂದಾಯ ಕೊರತೆ = ಕಂದಾಯ ಆದಾಯ - ಕಂದಾಯ ವೆಚ್ಚ

## ವ್ಯವಹಾರ ಅಧ್ಯಯನ

## ಅಧ್ಯಾಯ - 32

## ಉದ್ಯಮಶೀಲತೆ

**1.ಉದ್ಯಮಿ ಎಂಬ ಪದವು ಫ್ರೆಂಚ್ ಭಾಷೆಯ ಯಾವ ಪದದಿಂದ ಬಂದಿದೆ** 2017 GPSTR

- "ಎಂಟ್ರಪ್ರೆಂಡೆ "

**2. ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಿದ ವರ್ಷ**

- 1978

**3.'ಅಪೋಲೋ' ವೈದ್ಯಶಾಲೆಗಳ ಸಮೂಹವನ್ನು ಆರಂಭಿಸಿದವರು.**

- ಡಾ. ಪ್ರತಾಪ್ ರೆಡ್ಡಿ

**4. ವಿಪ್ರೊ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು**

- ಅಜೀಂ ಪ್ರೇಮ್‌ಜಿ



Scanned with OKEN Scanner

5.ಭಾರತದ ಅತಿ ದೊಡ್ಡ ಜೆಟ್ ವಾಯುಮಾರ್ಗ ಸಂಸ್ಥೆಯ ಅಧ್ಯಕ್ಷರು

- ನರೇಶ್ ಗೋಯಲ್

6. ಭಾರತದ ದೂರದರ್ಶನ ಕ್ಷೇತ್ರದಲ್ಲಿ 'ಅಧಿಪತ್ಯ ಸಾಧಿಸಿದ ರಾಣಿ' ಎಂದೇ ಹೆಸರು ಮಾಡಿದವರು.

- ಏಕ್ತ ಕಪೂರ್

7.ಜೀವ ವಿಜ್ಞಾನ ತಂತ್ರಜ್ಞಾನದ 'ಬಯೋಕಾನ್ ನಿಗಮ'ದ ಅಧ್ಯಕ್ಷರು

2019 GPSTR

- ಕಿರಣ್ ಮುಜುಮ್‌ದಾರ್ ಷಾ

8. NASDAQ ನಲ್ಲಿ ನೋಂದಾಯಿತಗೊಂಡ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ ಇದಾಗಿದೆ.

- ರಿಲಯನ್ಸ್

9.ಗುಜರಾತಿನ ಕೈರಾ ಜಿಲ್ಲೆಯ ಆನಂದ್ ಹೈನುಗಾರಿಕೆಯನ್ನು ಪ್ರಾರಂಭಿಸಿದವರು

- ವರ್ಗೀಸ್ ಕುರಿಯನ್

ಹೊಂದಿಸಿ ಬರೆಯಿರಿ

1) ನಾರಾಯಣ ಮೂರ್ತಿ - ಇನ್ಫೋಸಿಸ್

2) ವರ್ಗೀಸ್ ಕುರಿಯನ್ - ಬಿಳಿಕ್ರಾಂತಿಯ ಪಿತಾಮಹ

3) ಧೀರು ಬಾಯಿ ಅಂಬಾನಿ - ರಿಲಯನ್ಸ್

4) ಏಕ್ತಾ ಕಪೂರ್ - ಬಾಲಾಜಿ ದೂರದರ್ಶನ ಚಿತ್ರ



Scanned with OKEN Scanner

## ಅಧ್ಯಾಯ - 33

# ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

1. ಗ್ರಾಹಕ ಸಂರಕ್ಷಣೆ ಮಂಡಳಿಯ ಪ್ರಮುಖ ಕಾರ್ಯವೆಂದರೆ

   - ಗುಣಮಟ್ಟದ ಸರಕು ಮತ್ತು ಸೇವೆಗಳನ್ನು ಖಾತರಿಪಡಿಸುವುದು

2. ಬಳಕೆದಾರನಿಗಿರುವ ಮತ್ತೊಂದು ಹೆಸರೇನು

   - ಗ್ರಾಹಕ

3. "ಮಾರುಕಟ್ಟೆಯ ರಾಜ" ಎಂದು ಯಾರನ್ನು ಕರೆಯುವರು

   - ಗ್ರಾಹಕ

4. ಪ್ರತಿ ವರ್ಷ "ವಿಶ್ವ ಗ್ರಾಹಕರ ದಿನ'ವನ್ನು ಎಂದು ಆಚರಿಸುತ್ತೇವೆ.

   - ಮಾರ್ಚ್ 15

5. ಟೆಲಿಶಾಪಿಂಗ್ ಎಂದರೆ

   - ಮನೆಯಲ್ಲಿ ಕುಳಿತು ವ್ಯಾಪಾರ ಮಾಡುವುದು

6. ಭಾರತದಲ್ಲಿ 1965 ರಲ್ಲಿ ಅವೇರ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದವರು

   - ಮುಂಬೈ ಮಹಿಳೆಯರು



Scanned with OKEN Scanner

**7. 20 ಲಕ್ಷ ರೂಪಾಯಿಗಿಂತ ಹೆಚ್ಚಾಗಿರದ ಮೌಲ್ಯದ ದೂರುಗಳನ್ನು ಗ್ರಾಹಕರು ದೂರುಗಳನ್ನು ಯಾವ ವೇದಿಕೆಗೆ ಸಲ್ಲಿಸಬೇಕು TET 2020**

- **ಜಿಲ್ಲಾ ವೇದಿಕೆ**

**8. 20 ಲಕ್ಷ ರೂಪಾಯಿಗಿಂತ ಹೆಚ್ಚು ಹಾಗೂ 1 ಕೋಟಿ ರೂಪಾಯಿಗಿಂತ ಕಡಿಮೆ ಮೌಲ್ಯದ ದೂರುಗಳನ್ನು ಗ್ರಾಹಕರು ಯಾವ ವೇದಿಕೆಗೆ/ಆಯೋಗಕ್ಕೆ ಸಲ್ಲಿಸಬೇಕು**

- **ರಾಜ್ಯ ಆಯೋಗ**

**9. ಮೊಟ್ಟ ಮೊದಲು ಭಾರತದಲ್ಲಿ 1965ರಲ್ಲಿ ಮುಂಬೈ ಪಟ್ಟಣದ ಕೆಲವು ಮಹಿಳೆಯರು ಗ್ರಾಹಕರ ರಕ್ಷಣೆಗಾಗಿ ಪ್ರಾರಂಭಿಸಿದ ಸಂಸ್ಥೆ**

- **ಅವೇರ್ (AWARE)**

**10. ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ವರ್ಷ ಯಾವುದು**

- **1986**

**11. ವಿಶ್ವ ಗ್ರಾಹಕರ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15,1962ರಲ್ಲಿ ಅಮೇರಿಕದ ಜಾನ್ ಎಫ್. ಕೆನಡಿಯವರು ಮಂಡಿಸಿದ ವಿಧೇಯಕವು ಗ್ರಾಹಕರಿಗೆ ನೀಡಿದ ಹಕ್ಕುಗಳಿವು**

- **ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರ**

**12. ಅಮೆರಿಕದ ನಾಗರಿಕರಿಗೆ ನಾಗರಿಕರಿಗೆ ಸಂರಕ್ಷತೆ, ಮಾಹಿತಿ, ನಿವೇದನೆ ಮತ್ತು ಪರಿಹಾರಎಂಬ 4 ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದ ಅಧ್ಯಕ್ಷ**

- **ಜಾನ್ ಎಫ್. ಕೆನಡಿ**



Scanned with OKEN Scanner

13. ಜಿಲ್ಲಾ ಗ್ರಾಹಕ ನ್ಯಾಯಪೀಠದ ಅಧ್ಯಕ್ಷರನ್ನು ಯಾರು ನೇಮಿಸುತ್ತಾರೆ

- ರಾಜ್ಯ ಸರ್ಕಾರ

NAVACHETANA EDUCATIONS
7019752139



Scanned with OKEN Scanner